ಸಂಪುಟ 01 | ಸಂಚಿಕೆ 189 ಭಾನುವಾರ 13 ಸೆಪ್ಟೆಂಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಅಂತರರಾಷ್ಟ್ರೀಯ ಚಾಕೊಲೇಟ್ ದಿನA (International Chocolate Day)**
ಮಿಲ್ಟನ್ ಎಸ್. ಹರ್ಷಿ ಅವರ ಜನ್ಮದಿನವನ್ನು ಸ್ಮರಿಸುವ ದಿನವಾಗಿ ಇದನ್ನು ಆಚರಿಸಲಾಗುತ್ತದೆ. ಚಾಕೊಲೇಟ್‌ನ ಜನಪ್ರಿಯತೆ ಮತ್ತು ಅದರ ಇತಿಹಾಸವನ್ನು ನೆನಪಿಸಿಕೊಳ್ಳುವ ದಿನವೂ ಹೌದು.

**2) ಪ್ರೋಗ್ರಾಮರ್ಸ್ ದಿನ (Programmers' Day)**
ವರ್ಷದ 256ನೇ ದಿನವನ್ನು ಪ್ರೋಗ್ರಾಮರ್ಸ್ ದಿನವಾಗಿ ಆಚರಿಸಲಾಗುತ್ತದೆ. 256 ಎಂಬುದು 8-ಬಿಟ್ ಬೈಟ್‌ನಲ್ಲಿ ಪ್ರತಿನಿಧಿಸಬಹುದಾದ ವಿಭಿನ್ನ ಮೌಲ್ಯಗಳ ಸಂಖ್ಯೆಯಾಗಿದೆ.

**3) ರಾಷ್ಟ್ರೀಯ ಅಜ್ಜ-ಅಜ್ಜಿ ದಿನ (National Grandparents Day)** ಅಮೆರಿಕದಲ್ಲಿ Labour ಆಚಿಥಿ ನಂತರ ಬರುವ ಭಾನುವಾರ ಈ ದಿನವನ್ನು ಆಚರಿಸಲಾಗುತ್ತದೆ. ಅಜ್ಜ-ಅಜ್ಜಿಯರ ಪ್ರೀತಿ, ಅನುಭವ ಮತ್ತು ಕುಟುಂಬಕ್ಕೆ ನೀಡುವ ಕೊಡುಗೆಯನ್ನು ಗೌರವಿಸುವ ಉದ್ದೇಶ ಹೊಂದಿದೆ.

**4) ಸಕಾರಾತ್ಮಕ ಚಿಂತನೆ ದಿನ (Positive Thinking Day)**
ಆಶಾವಾದಿ ಮನೋಭಾವ ಬೆಳೆಸಿಕೊಳ್ಳಲು ಮತ್ತು ಸಕಾರಾತ್ಮಕ ಚಿಂತನೆಯ ಪ್ರಯೋಜನಗಳನ್ನು ಅರಿಯಲು ಪ್ರೇರೇಪಿಸುವ ದಿನ.

**5)ರಾಷ್ಟ್ರೀಯ ಕಡಲೆಕಾಯಿ ದಿನ (National Peanut Day)**
ಜನಪ್ರಿಯ ಆಹಾರ ಪದಾರ್ಥವಾಗಿರುವ ಕಡಲೆಕಾಯಿಯ ಮಹತ್ವ ಮತ್ತು ಕೃಷಿಯಲ್ಲಿ ಅದರ ಪಾತ್ರವನ್ನು ಗೌರವಿಸುವ ದಿನ.

## ಸುಭಾಷಿತ

ಸೋಲು ಎಂಬ ರೋಗವನ್ನು ನಾಶ ಮಾಡಲು, ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮವೇ ಉತ್ತಮವಾದ ಮದ್ದು.
-ಎ.ಪಿ.ಜೆ. ಅಬ್ದುಲ್ ಕಲಾಂ

## ಸನ್ ರೈಸ್ ಕಾಲೇಜಿನ ಶನಿವಾರದ ವಿಶೇಷ ಉಪನ್ಯಾಸ ನೀಡಿದ ಡಾ.ನಿವೇದಿತಾ.ಎನ್

# ಚರ್ಮದ ಆರೈಕೆ ಹಾಗೂ ಬೆಡ್‌ಸೋರ್ ಆರೈಕೆ ಕುರಿತು ವಿಶೇಷ ಉಪನ್ಯಾಸ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸನ್‌ರೈಸ್ ಡಿ-ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜು ಸಿಂಧನೂರು ವತಿಯಿಂದ ಪ್ರತೀ ಶನಿವಾರ ಆಯೋಜಿಸಲಾಗುತ್ತಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ ಸೆ.12ರಂದು ಸನ್‌ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ "ವೈಯಕ್ತಿಕ ಜೀವನದಲ್ಲಿ ಚರ್ಮದ ಆರೈಕೆ ಹಾಗೂ ಆಸ್ಪತ್ರೆಯ ಪರಿಸರದಲ್ಲಿ ರೋಗಿಯ ಚರ್ಮದ ಆರೈಕೆ ಮತ್ತು ಬೆಡ್‌ಸೋರ್ (ಒತ್ತಡದ ಗಾಯ) ಆರೈಕೆ" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.



ಕಾರ್ಯಕ್ರಮಕ್ಕೆ ಸಿಂಧನೂರಿನ ಸಹನಾ ಮಕ್ಕಳ ಆಸ್ಪತ್ರೆಯ ಖ್ಯಾತ ತಜ್ಞ ವೈದ್ಯರಾದ ಡಾ. ನಿವೇದಿತಾ ಎನ್. (MBBS, MD DVL, DNB, FRGUHS, Consultant Dermatologist, Cosmetologist, Trichologist & Hair Transplant Surgeon) ಅವರು ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ, ನರ್ಸಿಂಗ್ ವಿದ್ಯಾರ್ಥಿಗಳಿಗೆ ಚರ್ಮದ ಆರೈಕೆಯ ಕುರಿತು ಸಮಗ್ರ ಹಾಗೂ ಪ್ರಾಯೋಗಿಕ ಮಾಹಿತಿಯನ್ನು ನೀಡಿದರು.

ವೈಯಕ್ತಿಕ ಜೀವನದಲ್ಲಿ ಚರ್ಮದ ಆರೋಗ್ಯವನ್ನು ಕಾಪಾಡಿಕೊಳ್ಳುವ ಅಗತ್ಯತೆ, ದೈನಂದಿನ ಚರ್ಮದ ಆರೈಕೆ, ಸ್ವಚ್ಛತೆ, ಚರ್ಮಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸುವುದು ಹಾಗೂ ಸೂಕ್ತ ವೈದ್ಯಕೀಯ ಸಲಹೆ ಪಡೆಯುವ ಮಹತ್ವದ ಕುರಿತು ಅವರು ವಿದ್ಯಾರ್ಥಿಗಳಿಗೆ ವಿವರಿಸಿದರು. ಅದೇ ರೀತಿ ಆಸ್ಪತ್ರೆಯ ಪರಿಸರದಲ್ಲಿ ರೋಗಿಯ ಚರ್ಮದ ಆರೈಕೆ ನರ್ಸ್‌ಗಳ ಪ್ರಮುಖ ಜವಾಬ್ದಾರಿಗಳಲ್ಲಿ ಒಂದಾಗಿದೆ ಎಂದು ತಿಳಿಸಿದ ಡಾ. ನಿವೇದಿತಾ ಅವರು, ದೀರ್ಘಕಾಲ ಹಾಸಿಗೆಯಲ್ಲಿರುವ ರೋಗಿಗಳಲ್ಲಿ ಉಂಟಾಗಬಹುದಾದ ಬೆಡ್‌ಸೋರ್ ಅಥವಾ ಒತ್ತಡದ ಗಾಯಗಳನ್ನು ತಡೆಗಟ್ಟುವ ವಿಧಾನಗಳು, ರೋಗಿಯ ದೇಹದ ಸ್ಥಿತಿಯನ್ನು ನಿಯಮಿತವಾಗಿ ಬದಲಾಯಿಸುವುದು, ಸ್ವಚ್ಛತೆ ಕಾಪಾಡುವುದು, ಚರ್ಮವನ್ನು ಪರಿಶೀಲಿಸುವುದು, ಪೌಷ್ಟಿಕ ಆಹಾರ ಹಾಗೂ ಸೂಕ್ತ ಆರೈಕೆಯ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ವಿವರವಾಗಿ ತಿಳಿಸಿದರು.

ರೋಗಿಯ ಆರೈಕೆಯಲ್ಲಿ ನರ್ಸ್‌ಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ವೈದ್ಯರು ನೀಡುವ ಚಿಕಿತ್ಸೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದರ ಜೊತೆಗೆ, ರೋಗಿಯ ದೈಹಿಕ ಹಾಗೂ ಮಾನಸಿಕ ಸ್ಥಿತಿಯನ್ನು ಗಮನಿಸಿ ಅಗತ್ಯ ಆರೈಕೆ ನೀಡುವುದು ನರ್ಸಿಂಗ್ ವೃತ್ತಿಯ ಪ್ರಮುಖ ಭಾಗವಾಗಿದೆ ಎಂದು ಅವರು ಹೇಳಿದರು.

ಉಪನ್ಯಾಸದ ಸಂದರ್ಭದಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಡಾ. ನಿವೇದಿತಾ ಅವರು, ವಿದ್ಯಾರ್ಥಿಗಳ ವಿವಿಧ ಪ್ರಶ್ನೆಗಳಿಗೆ ಉತ್ತರಿಸಿ, ನರ್ಸಿಂಗ್ ಕ್ಷೇತ್ರದಲ್ಲಿ ಜ್ಞಾನ, ಕೌಶಲ್ಯ, ಶಿಸ್ತು, ಮಾನವೀಯತೆ ಹಾಗೂ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವಂತೆ ಸಲಹೆ ನೀಡಿದರು. ವಿಶೇಷ ಉಪನ್ಯಾಸವು ವಿದ್ಯಾರ್ಥಿಗಳಿಗೆ ವೈದ್ಯಕೀಯ ಜ್ಞಾನವನ್ನು ವಿಸ್ತರಿಸುವುದರ ಜೊತೆಗೆ, ರೋಗಿಗಳ ಆರೈಕೆಯಲ್ಲಿ ಇನ್ನಷ್ಟು ಆತ್ಮವಿಶ್ವಾಸದಿಂದ ಕಾರ್ಯನಿರ್ವಹಿಸಲು ಪ್ರೇರಣೆ ನೀಡಿತು. ನರ್ಸಿಂಗ್ ವೃತ್ತಿಯಲ್ಲಿ ನಿರಂತರ ಕಲಿಕೆಗೆ ಆದ್ಯತೆ ಸನ್‌ರೈಸ್ ಸಂಸ್ಥೆಯಲ್ಲಿ ಪ್ರತೀ ಶನಿವಾರ ತಜ್ಞ ವೈದ್ಯರು ಹಾಗೂ ವಿವಿಧ ಕ್ಷೇತ್ರಗಳ ಪರಿಣಿತರನ್ನು ಆಹ್ವಾನಿಸಿ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ. ತರಗತಿಯ ಪಠ್ಯಕ್ರಮದ ಜೊತೆಗೆ ಪ್ರಾಯೋಗಿಕ ಜ್ಞಾನ ಮತ್ತು ವೃತ್ತಿಪರ ಕೌಶಲ್ಯಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು ಈ ಉಪನ್ಯಾಸ ಸರಣಿಯ ಪ್ರಮುಖ ಉದ್ದೇಶವಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಸನ್‌ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಲಾಜರ್ ಸಿರಿಲ್ ಅವರು, ವಿದ್ಯಾರ್ಥಿಗಳಿಗೆ ಚರ್ಮದ ಆರೈಕೆ, ಬೆಡ್‌ಸೋರ್ ತಡೆಗಟ್ಟುವಿಕೆ ಹಾಗೂ ರೋಗಿಗಳ ಆರೈಕೆಯ ಕುರಿತು ಅತ್ಯಂತ ಉಪಯುಕ್ತವಾದ ಮಾಹಿತಿಯನ್ನು ನೀಡಿದ ಡಾ. ನಿವೇದಿತಾ ಎನ್. ಅವರಿಗೆ ಸಂಸ್ಥೆಯ ಪರವಾಗಿ ಕೃತಜ್ಞತೆ ಸಲ್ಲಿಸಿದರು. ನರ್ಸಿಂಗ್ ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ತಜ್ಞರಿಂದ ನೇರವಾಗಿ ಪ್ರಾಯೋಗಿಕ ಹಾಗೂ ವೃತ್ತಿಪರ ಜ್ಞಾನವನ್ನು ಪಡೆದುಕೊಳ್ಳಬೇಕು. ಇಂತಹ ವಿಶೇಷ ಉಪನ್ಯಾಸಗಳು ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸುವುದರ ಜೊತೆಗೆ, ಅವರಲ್ಲಿ ವೃತ್ತಿಪರ ಆತ್ಮವಿಶ್ವಾಸವನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದು ಲಾಜರ್ ಸಿರಿಲ್ ಹೇಳಿದರು.

ತಜ್ಞ ವೈದ್ಯೆಯಾಗಿ ಆಗಮಿಸಿ, ವಿದ್ಯಾರ್ಥಿಗಳಿಗೆ ಅಮೂಲ್ಯವಾದ ಜ್ಞಾನ ಮತ್ತು ಮಾರ್ಗದರ್ಶನ ನೀಡಿದ ಡಾ. ನಿವೇದಿತಾ ಎನ್. ಅವರಿಗೆ ಸನ್‌ರೈಸ್ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ., ಕಾರ್ಯದರ್ಶಿಯಾದ ಇರ್ಷಾದ್ ಕೆ., ಎಲ್ಲಾ ವಿಭಾಗಗಳ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಪರವಾಗಿ ಪ್ರಾಚಾರ್ಯ ಲಾಜರ್ ಸಿರಿಲ್ ಅವರು ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಸನ್‌ರೈಸ್ ಡಿ-ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ವಿಶೇಷ ಉಪನ್ಯಾಸದ ಪ್ರಯೋಜನ ಪಡೆದರು. ವಿದ್ಯಾರ್ಥಿಗಳ ಜ್ಞಾನ ವೃದ್ಧಿಗೆ ನಿರಂತರ ವಿಶೇಷ ಉಪನ್ಯಾಸಗಳು ಸನ್‌ರೈಸ್ ವಿದ್ಯಾ ಸಂಸ್ಥೆಯ ಶೈಕ್ಷಣಿಕ ಹೆಜ್ಜೆ.








## ನಗರೀಕರಣಕ್ಕೆ ಬ್ರೇಕ್: ಕುರುಗೋಡು, ತೆಕ್ಕಲಕೋಟೆಗೆ 100 ಅಡಿ ಅಗಲದ ರಿಂಗ್ ರೋಡ್ ಭಾಗ್ಯ!

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕುರುಗೋಡು : ರಾಜ್ಯದ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿಗೆ ಸರ್ಕಾರ ಮುಂದಾಗಿದ್ದು, ಜಿಲ್ಲೆಯ ಪ್ರಮುಖ ತಾಲೂಕು ಕೇಂದ್ರಗಳಾದ ಕುರುಗೋಡು ಮತ್ತು ತೆಕ್ಕಲಕೋಟೆ ಪಟ್ಟಣಗಳಿಗೆ ಹೊಸದಾಗಿ ರಿಂಗ್ ರೋಡ್ (ವರ್ತುಲ ರಸ್ತೆ) ನಿರ್ಮಾಣವಾಗಲಿದೆ.**

ರಾಜ್ಯ ಸರ್ಕಾರ ಜಾರಿಗೆ ತಂದಿರುವ 'ರೋಡ್ ನೆಟ್ವರ್ಕ್ ಗ್ರಿಡ್ ಪ್ಲಾನ್' (Road Network Grid Plan) ಯೋಜನೆಯಡಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ. ರಾಜ್ಯಾದ್ಯಂತ ಗುರುತಿಸಲಾದ 108 ಪಟ್ಟಣಗಳ ಪಟ್ಟಿಯಲ್ಲಿ ಬಳ್ಳಾರಿ ಜಿಲ್ಲೆಯ ಈ ಎರಡು ಪಟ್ಟಣಗಳು ಸ್ಥಾನ ಪಡೆದಿವೆ.

ಪ್ರತಿಯೊಂದು ಪಟ್ಟಣಕ್ಕೂ ತಲಾ 100 ಅಡಿ ಅಗಲದ ಸುಸಜ್ಜಿತ ವರ್ತುಲ ರಸ್ತೆ ನಿರ್ಮಿಸಲಾಗುತ್ತದೆ. ನಗರೀಕರಣದಿಂದ ಹೆಚ್ಚುತ್ತಿರುವ ಟ್ರಾಫಿಕ್ ಸಮಸ್ಯೆಗೆ ಮುಕ್ತಿ ನೀಡಲು ಜಿಐಎಸ್ (GIS) ತಂತ್ರಜ್ಞಾನ



ಆಧಾರಿತ ನಕ್ಷೆ ಸಿದ್ಧಪಡಿಸಲಾಗಿದೆ.


2 ಕಿ.ಮೀ ಇಂಪ್ಯಾಕ್ಟ್ ಜೋನ್: ವರ್ತುಲ ರಸ್ತೆಯ ಸುತ್ತಲೂ 2 ಕಿಲೋಮೀಟರ್ ವ್ಯಾಪ್ತಿಯನ್ನು ಪ್ರಭಾವ ವಲಯ (Impact Zone) ಎಂದು ಘೋಷಿಸಲಾಗುತ್ತದೆ. ಹಸಿರು ವಲಯಕ್ಕೆ ಆದ್ಯತೆ:ರಸ್ತೆ ಸಂಚಾರ ದಟ್ಟಣೆ ನಿಯಂತ್ರಿಸುವುದರ ಜೊತೆಗೆ ಪರಿಸರ ಸಂರಕ್ಷಣೆಗೂ ಈ ಯೋಜನೆಯಲ್ಲಿ ಆದ್ಯತೆ ನೀಡಲಾಗಿದೆ. ನಿಗದಿಪಡಿಸಲಾದ ಇಂಪ್ಯಾಕ್ಟ್ ಜೋನ್‌ನಲ್ಲಿ ಯಾವುದೇ ರೀತಿಯ ಮನೆ ಅಥವಾ ವಾಣಿಜ್ಯ ಕಟ್ಟಡಗಳನ್ನು ಕಟ್ಟಲು ಅವಕಾಶವಿರುವುದಿಲ್ಲ. ಬದಲಿಗೆ, ಈ ವಲಯದಲ್ಲಿ ಕಡ್ಡಾಯವಾಗಿ ಮರಗಳನ್ನು ಬೆಳೆಸಿ ಹಸಿರು ವಲಯವನ್ನಾಗಿ ಪರಿವರ್ತಿಸಲು ಸಂಪುಟ ಸಭೆ ಅನುಮೋದನೆ ನೀಡಿದೆ. ಇದರಿಂದಾಗಿ 2ನೇ ಮತ್ತು 3ನೇ ಹಂತದ ನಗರಗಳು ವ್ಯವಸ್ಥಿತವಾಗಿ ಅಭಿವೃದ್ಧಿ ಹೊಂದಲು ಹಾದಿ ಸುಗಮವಾಗಲಿದೆ.

## "ಹೆಂಡತಿ ಕಾಟ ತಡಿಯೋಕಾಗ್ತಿಲ್ಲ!" ಬಳ್ಳಾರಿಯಲ್ಲಿ ಪೊಲೀಸ್ ಸ್ಟೇಷನ್ ಮುಂದೆಯೇ ಟ್ರಾನ್ಸ್‌ಫಾರ್ಮರ್ ಹತ್ತಿ ಹೈಡ್ರಾಮಾ ಸೃಷ್ಟಿಸಿದ ವ್ಯಕ್ತಿ!

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ: ಪತ್ನಿಯ ಕಾಟ ಹಾಗೂ ಕೌಟುಂಬಿಕ ಕಲಹಕ್ಕೆ ಬೇಸತ್ತ ವ್ಯಕ್ತಿಯೊಬ್ಬ ವಿದ್ಯುತ್ ಟ್ರಾನ್ಸ್‌ಫಾರ್ಮರ್ (TC) ಏರಿ ಆತ್ಮಹತ್ಯೆಗೆ ಯತ್ನಿಸಿದ ವಿಲಕ್ಷಣ ಘಟನೆ ಬಳ್ಳಾರಿ ನಗರದ ಬ್ರೂಸ್‌ಪೇಟೆ ಪೊಲೀಸ್ ಠಾಣೆಯ ಮುಂಭಾಗದಲ್ಲಿ ನಡೆದಿದೆ.ಬಳ್ಳಾರಿಯ ಮುಂಡರಗಿ ನಿವಾಸಿಯಾದ ಇಸ್ಮಾಯಿಲ್ ಎಂಬಾತನೇ ಈ ಹೈಡ್ರಾಮಾ ಸೃಷ್ಟಿಸಿದ ಭೂಪ.**

ಠಾಣೆಯಿಂದ ಓಡಿ ಬಂದ ಪತಿ:ಇಸ್ಮಾಯಿಲ್ ಹಾಗೂ ಆತನ ಪತ್ನಿ ನಡುವೆ ದೀರ್ಘಕಾಲದಿಂದ ದಾಂಪತ್ಯ ಕಲಹ ನಡೆದಿತ್ತು. ಈ ಸಂಬಂಧ ದೂರು ನೀಡಲು ಇಬ್ಬರೂ ಬ್ರೂಸ್‌ಪೇಟೆ ಪೊಲೀಸ್ ಠಾಣೆಗೆ ಬಂದಿದ್ದರು. ಪೊಲೀಸರು ಇಬ್ಬರನ್ನೂ ಕೂರಿಸಿ ವಿಚಾರಣೆ ನಡೆಸುತ್ತಿದ್ದಾಗ, ಪತ್ನಿಯ ಆರೋಪಗಳಿಂದ ತೀವ್ರ ಬೇಸತ್ತ



ಇಸ್ಮಾಯಿಲ್ ಇದ್ದಕ್ಕಿದ್ದಂತೆ ಠಾಣೆಯಿಂದ ಹೊರಗೆ ಓಡಿ ಬಂದಿದ್ದಾನೆ."ನನಗೆ ಹೆಂಡತಿ ಕಾಟ ತಡೆಯಲು ಸಾಧ್ಯವಿಲ್ಲ, ನಾನು ಸಾಯುತ್ತೇನೆ" ಎಂದು ಕಿರುಚಾಡುತ್ತಾ, ಪೊಲೀಸ್ ಠಾಣೆಯ ಎದುರೇ ಇದ್ದ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮೇಲೇರಿ ಕುಳಿತಿದ್ದಾನೆ.

ಇದನ್ನು ನೋಡಿ ಪೊಲೀಸರು ಹಾಗೂ ಸಾರ್ವಜನಿಕರು ಕೆಲಕಾಲ ದಿಕ್ಕೇ ತೋಚದಂತಾಗಿದ್ದರು.ತಪ್ಪಿದ ಭಾರಿ ಅನಾಹುತ:ಇಸ್ಮಾಯಿಲ್ ಟ್ರಾನ್ಸ್‌ಫಾರ್ಮರ್ ಹತ್ತುತ್ತಿದ್ದಂತೆಯೇ ಎಚ್ಚೆತ್ತ ಪೊಲೀಸರು ಮತ್ತು ಸ್ಥಳೀಯರು ಕೂಡಲೇ ಜೆಸ್ಕಾಂ (GESCOM) ಅಧಿಕಾರಿಗಳನ್ನು ಸಂಪರ್ಕಿಸಿ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ. ಸಮಯಪ್ರಜ್ಞೆಯಿಂದಾಗಿ ಭಾರಿ ಅನಾಹುತವೊಂದು ತಪ್ಪಿದಂತಾಗಿದೆ. ಟ್ರಾನ್ಸ್‌ಫಾರ್ಮರ್ ಮೇಲೆ ಕುಳಿತು ಸಮಾಧಾನ ಕಳೆದುಕೊಂಡಿದ್ದ ಇಸ್ಮಾಯಿಲ್‌ನನ್ನು ಪೊಲೀಸರು ಹರಸಾಹಸ ಪಟ್ಟು, ಮಾತುಕತೆಯ ಮೂಲಕ ಮನವೊಲಿಸಿ ಸುರಕ್ಷಿತವಾಗಿ ಕೆಳಗೆ ಇಳಿಸಿದ್ದಾರೆ. ಸದ್ಯ ಆತನನ್ನು ವಶಕ್ಕೆ ಪಡೆದಿರುವ ಬ್ರೂಸ್‌ಪೇಟೆ ಪೊಲೀಸರು ಆಪ್ತಸಮಾಲೋಚನೆ (Counseling) ನಡೆಸುತ್ತಿದ್ದು, ಸಾರ್ವಜನಿಕ ಶಾಂತಿಭಂಗದ ಹಿನ್ನೆಲೆಯಲ್ಲಿ ಕಾನೂನು ಕ್ರಮ ಕೈಗೊಂಡಿದ್ದಾರೆ.

# ಪ್ರತಿ ತಿಂಗಳಿಗೊಮ್ಮೆ ವಿಶಾಖಪಟ್ನಂ ಸಖಮೂರು ಕುಟುಂಬದಿಂದ ಕಾರುಣ್ಯಾಶ್ರಮದಲ್ಲಿ ಮಹಾಪ್ರಸಾದ ಸೇವೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಆಗುವ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಪ್ರತಿ ತಿಂಗಳು ಆಂಧ್ರಪ್ರದೇಶದ ವಿಶಾಖ ಪಟ್ನಂ ನಗರದ ನಿವಾಸಿಗಳಾದ ಎಸ್. ಸುರೇಶಬಾಬು.**

ಎಸ್. ಚಂದ್ರಶೇಖರ. ಎಸ್. ಶ್ರೀನಿವಾಸ ಹಾಗೂ ಸಕಲ ಸಖಮೂರು ಕುಟುಂಬದ ವತಿಯಿಂದ ದಿ. ಸಖಮೂರು ಸುಶೀಲಾ ದೇವಿ ಅಮ್ಮನವರ ಪುಣ್ಯಾರಾಧನೆಯನ್ನು ನಿರಂತರ ಪ್ರತಿ ತಿಂಗಳಿಗೊಮ್ಮೆ ಇವರ ಸ್ಮರಣೋತ್ಸವ ಕಾರ್ಯಕ್ರಮವನ್ನು ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿಸಲಾಯಿತು. ಮತ್ತು ಲಿಂಗಸೂಗೂರು ತಾಲೂಕಿನ ಅಂಕಲಿಮಠ ಸುಕ್ಷೇತ್ರದ ತಲೆಕಟ್ಟು ಗ್ರಾಮದ ಯಂಕಮ್ಮ ಚಲುವಾದಿ ಅವರ ಮಗಳಾದ



ದಿ.ಪಲ್ಲವಿ ಚಲುವಾದಿ ಅವರ ನಾಲ್ಕನೇ ವರ್ಷದ ಪುಣ್ಯಾರಾಧನೆಯನ್ನು ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕಾರ್ಯಕ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವಸ್ವಾಮಿ ಹಿರೇಮಠ ಮಾತನಾಡಿ ಆಂಧ್ರಪ್ರದೇಶದಲ್ಲಿರುವ ವಿಶಾಖಪಟ್ಟಣಂ ಸಖಮೂರು ಕುಟುಂಬ ಆ ಕುಟುಂಬದ ಹಿರಿಯರಾದ ಸುಶೀಲಾ ದೇವಿ ಅಮ್ಮನವರ ಪುಣ್ಯಾರಾಧನೆಯನ್ನು ಪ್ರತೀ ತಿಂಗಳು ಕೂಡ ಅಂಧ-ಅನಾಥರ ಹಸಿವು ನೀಗಿಸುವ ಮೂಲಕ ಹೆತ್ತ ತಾಯಿಯನ್ನು ಈ ರೀತಿ ಸ್ಮರಿಸುವುದು ಮಾನವೀಯ ಮೌಲ್ಯಗಳು ಹೆಚ್ಚಿಸಿದಂತಾಗಿದೆ.

ವರ್ಷಕ್ಕೊಮ್ಮೆ ಪುಣ್ಯಾರಾಧನೆಯನ್ನು ಮಾಡುವಂತಹ ಈಗಿನ ಕಾಲಘಟ್ಟದಲ್ಲಿ ಪ್ರತಿ ತಿಂಗಳಿಗೊಮ್ಮೆ ಆ ಕುಟುಂಬದ ಸದಸ್ಯರು ಮಾಡುತ್ತಿರುವ ಈ ಕಾರ್ಯ ಭಗವಂತನ ಪೂಜೆಗಿಂತ ಮಿಗಿಲಾಗಿದೆ. ಮತ್ತು ವಿಶೇಷವಾಗಿ ಅಂಕಲಿಮಠ ತಲೆಕಟ್ಟು ಗ್ರಾಮದ ಯಂಕಮ್ಮ ಚಲುವಾದಿಯವರು ಮಗಳಾದ ದಿ.ಪಲ್ಲವಿ ಚಲುವಾದಿಯವರ ಜನ್ಮದಿನ ಮತ್ತು ಪುಣ್ಯಾರಾಧನೆಯನ್ನು ಕಾರುಣ್ಯದಂತಹ ಕರುಣೆಯ ಕುಟುಂಬದಲ್ಲಿ ನೆರವೇರಿಸಿ ಆಶ್ರಮದಲ್ಲಿರುವಂತಹ ಎಲ್ಲ ಹಿರಿಯರು ನಮ್ಮ ತಂದೆ ತಾಯಿಗಳ ಸಮಾನರು ಮತ್ತು ಆಶ್ರಮದಲ್ಲಿರುವ ವಯಸ್ಕರ ಬುದ್ಧಿಮಾಂದ್ಯರು ನಮ್ಮ ಮಕ್ಕಳ ಹಾಗೂ ಸಹೋದರ ಸಹೋದರಿಯರ ಸಮಾನರು ಎನ್ನುವ ಮನೋಭಾವನೆಯನ್ನು ಇಟ್ಟುಕೊಂಡು ಮಾಡುತ್ತಿರುವ ಈ ಎಲ್ಲಾ ಕಾರ್ಯಗಳು ನಿಜವಾದ ಅನ್ನಸಂತರ್ಪಣೆ ಎನ್ನುವ ಪದಕ್ಕೆ ಅರ್ಥ ತಂದು ಕೊಟ್ಟಿವೆ. ಅನ್ನದಾನ ಮಾಡುವವರು ಹಸಿದ ಜೀವಿಗಳಿಗೆ ಹಸಿವು ನೀಗಿಸಿದಾಗ ಮಾತ್ರ ಅನ್ನದಾನಕ್ಕೆ ಅರ್ಥ ಸಿಗುತ್ತದೆ.

ಸ್ವಾರ್ಥದ ಈ ಜಗತ್ತಿನಲ್ಲಿ ನಿಸ್ವಾರ್ಥದ ಅದೆಷ್ಟೋ ಇಂತಹ ಮನಸ್ಸುಗಳು ಕಾರುಣ್ಯ ಎನ್ನುವ ಕುಟುಂಬಕ್ಕೆ ಸುಂದರ ಬದುಕು ಕಟ್ಟಿಕೊಟ್ಟಿದ್ದಾರೆ. ದಿವಂಗತರುಗಳ ಹೆಸರಿನ ಮೂಲಕ ಮಾಡುತ್ತಿರುವ ಇಂತಹ ಸಮಾಜ ಪರ ಕಾರ್ಯಗಳು ಅವರುಗಳ ಆತ್ಮಕ್ಕೆ ನಿರಂತರ ಶಾಂತಿಯನ್ನು ಕರುಣಿಸುತ್ತವೆ. ಮತ್ತು ಅಗಲಿರುವಂತಹ ದಿವಂಗತರುಗಳ ಕುಟುಂಬಕ್ಕೆ ಆ ಭಗವಂತ ಅವರ ಅಗಲಿಕೆ ನೋಬರಿಸುವಂತಹ ಶಕ್ತಿಯನ್ನು ಕರುಣಿಸಲಿ ಮತ್ತು ಆ ಕುಟುಂಬಗಳಿಗೆ ಸಕಲೈಶ್ವರ್ಯ ಸಿರಿಸಂಪತ್ತು ಆಯಸ್ಸು ಆಯುರಾರೋಗ್ಯ ಸುಖ ಶಾಂತಿ ನೆಮ್ಮದಿ ಪ್ರಾಪ್ತಿಯಾಗಲಿ ಎನ್ನುವುದು ಕಾರುಣ್ಯ ಕುಟುಂಬದ ನಿತ್ಯ ನಿರಂತರ ಪ್ರಾರ್ಥನೆ ಎಂದು ಭಾವನಾತ್ಮಕವಾಗಿ ಮಾತನಾಡಿ ದಿವಂಗತರುಗಳಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದರು. ಈ ಕಾರ್ಯಕ್ರಮಗಳಲ್ಲಿ ಮುಖ್ಯ ಅತಿಥಿಗಳಾಗಿ ಸುಜಾತ ಹಿರೇಮಠ ಸದಸ್ಯರು ಕಾರುಣ್ಯ ಆಶ್ರಮ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಮಹಾಂತೇಶ ದೋಟಿಹಾಳ. ಶರಣು ಸ್ವಾಮಿ.ಬಸವ ಸ್ವಾಮಿ. ಅನೇಕರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ಮೌನದೊಳಗಿನ ಸಂಗೀತ

ಮೌನದೊಳಗೆ ಮೂಡುವ ಒಂದು ಮಧುರ ರಾಗ,
ಮನದಾಳದಲ್ಲಿ ಕೇಳಿಸುವ ಭಾವಗಳ ಭಾಗ.
ಮಾತುಗಳಿಲ್ಲದಿದ್ದರೂ ಅರ್ಥವಿದೆ ಅಲ್ಲಿ,
ಹೃದಯದ ನಾದವೊಂದು ಹರಿಯುವುದು ಮೆಲ್ಲನೆ.

ನಿಶ್ಶಬ್ದ ರಾತ್ರಿಯಲ್ಲಿ ಚಂದಿರನ ಬೆಳಕಂತೆ,
ಮೌನದ ಸಂಗೀತವು ಮನಸಿಗೆ ತಂಪಂತೆ.
ಕಣ್ಣಿನ ನೋಟದಲ್ಲೇ ಸಾವಿರ ಮಾತುಗಳು,
ಹೃದಯದ ತಾಳದಲ್ಲಿ ಮಧುರ ಗೀತೆಗಳು.

ಗಾಳಿಯ ಸದ್ದಿನಲ್ಲೂ ಒಂದು ರಾಗವಿದೆ,
ಎಲೆಗಳ ಅಲುಗಾಟದಲ್ಲೂ ಭಾವವಿದೆ.
ನದಿಯ ಹರಿವಿನಲ್ಲಿ ಜೀವನದ ಗಾನ,
ಮೌನದೊಳಗೆ ಕೇಳುವುದು ಆತ್ಮದ ತಾಳ.


ಕಳೆದುಹೋದ ನೆನಪುಗಳು ರಾಗವಾಗಿ ಮೂಡಿ,
ಹಳೆಯ ಕನಸುಗಳು ಮನದಲಿ ಹಾಡಿ,
ಮಾತಿಲ್ಲದ ಕ್ಷಣವೂ ಕವನವಾಗುತ್ತದೆ,
ಮೌನದ ಸಂಗೀತದಲ್ಲಿ ಮನಸು ಅರಳುತ್ತದೆ.

ಜಗವೆಲ್ಲ ಮೌನವಾದ ಕ್ಷಣ ಬಂದಾಗ,
ಒಳಗಿನ ಧ್ವನಿಯೇ ದಾರಿ ತೋರಿಸುವಾಗ,
ಮಾತಿಗಿಂತ ಮೌನವೇ ಹೇಳುವುದು ಸತ್ಯ,
ಅದರ ಸಂಗೀತವೇ ಬದುಕಿನ ನಿತ್ಯ.

## ಅಪಘಾತದಲ್ಲಿ ಗಾಯಗೊಂಡ ಮಕ್ಕಳ ಆರೋಗ್ಯ ವಿಚಾರಿಸಿದ ಶಾಸಕ ದೊಡ್ಡನಗೌಡ ಪಾಟೀಲ

❏ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ರಾಮದುರ್ಗದಿಂದ ಮಂತ್ರಾಲಯಕ್ಕೆ ತೆರಳುತ್ತಿದ್ದ ಮಿನಿ ಬಸ್‌ವೊಂದು ಮದಲಗಟ್ಟಿ ಗ್ರಾಮದ ಸಮೀಪ ಅಪಘಾತಕ್ಕೀಡಾದ ವಿಷಯ ತಿಳಿದ ತಕ್ಷಣ ಶಾಸಕ ದೊಡ್ಡನಗೌಡ ಎಚ್. ಪಾಟೀಲ ಅವರು ಕುಷ್ಟಗಿ ಆಸ್ಪತ್ರೆಗೆ ಭೇಟಿ ನೀಡಿ, ಚಿಕಿತ್ಸೆ ಪಡೆಯುತ್ತಿದ್ದ ಮಕ್ಕಳ ಆರೋಗ್ಯದ ಕುರಿತು ವಿಚಾರಿಸಿದರು.**



ಈ ಸಂದರ್ಭದಲ್ಲಿ ವೈದ್ಯರಿಂದ ಮಕ್ಕಳಿಗೆ ನೀಡಲಾಗುತ್ತಿರುವ ಚಿಕಿತ್ಸೆ ಹಾಗೂ ಆರೋಗ್ಯ ಸ್ಥಿತಿಗತಿಯ ಬಗ್ಗೆ ಮಾಹಿತಿ ಪಡೆದುಕೊಂಡರು. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಹೆಚ್ಚಿನ ಚಿಕಿತ್ಸೆ ಹಾಗೂ ಅಗತ್ಯ ವೈದ್ಯಕೀಯ ಆರೈಕೆಗಾಗಿ ಮಕ್ಕಳನ್ನು ಕೊಪ್ಪಳ ಜಿಲ್ಲಾಸ್ಪತ್ರೆಗೆ ಕಳುಹಿಸಲಾಗಿದೆ ಎಂದು ತಿಳಿಸಿದರು. ಮಕ್ಕಳು ಶೀಘ್ರವಾಗಿ ಸಂಪೂರ್ಣ ಗುಣಮುಖರಾಗಲಿ ಎಂದು ಹಾರೈಸಿದ ಶಾಸಕ ದೊಡ್ಡನಗೌಡ ಪಾಟೀಲ, ಮಕ್ಕಳಿಗೆ ಅಗತ್ಯವಿರುವ ಎಲ್ಲ ರೀತಿಯ ಚಿಕಿತ್ಸೆ ಹಾಗೂ ವೈದ್ಯಕೀಯ ನೆರವು ದೊರೆಯುವಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು. ಪೋಷಕರು ಆತಂಕಪಡದೆ ಧೈರ್ಯದಿಂದಿರಬೇಕು. ಮಕ್ಕಳ ಆರೋಗ್ಯದ ಕುರಿತು ನಿರಂತರವಾಗಿ ಗಮನಹರಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## 2 ಕೋಟಿ ವೆಚ್ಚದ ಬ್ರಿಜ್ ಕಂ ಬ್ಯಾರೇಜ್ ಉದ್ಘಾಟನೆ: ಶಾಸಕ ಹಂಪನಗೌಡ ಬಾದರ್ಲಿ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಎಲೆಕೂಡ್ಲಿಗಿ ಗ್ರಾಮದಲ್ಲಿ ಕಾಡಾ ಇಲಾಖೆಯ ವತಿಯಿಂದ ಸುಮಾರು 2 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ನೂತನ ಬ್ರಿಜ್ ಕಂ ಬ್ಯಾರೇಜ್‌ನ್ನು ಸಿಂಧನೂರು ಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ ಅವರು ಉದ್ಘಾಟಿಸಿದರು.**

ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಕೈಗೊಳ್ಳಲಾಗಿರುವ ಈ ಮಹತ್ವದ ಕಾಮಗಾರಿಯಿಂದ ಎಲೆಕೂಡ್ಲಿಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ. ಬಹುದಿನಗಳಿಂದ ಗ್ರಾಮಸ್ಥರು ಎದುರಿಸುತ್ತಿದ್ದ ಸಂಚಾರದ ಸಮಸ್ಯೆಗೆ ಪರಿಹಾರ ದೊರೆಯುವುದರ ಜೊತೆಗೆ, ರೈತರಿಗೆ ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ನೀರಿನ ಲಭ್ಯತೆ ಹಾಗೂ ನೀರಿನ ಸಂಗ್ರಹಣೆಗೆ ಈ ಬ್ರಿಜ್ ಕಂ ಬ್ಯಾರೇಜ್ ಸಹಕಾರಿಯಾಗಲಿದೆ.



ಬ್ರಿಜ್ ಕಂ ಬ್ಯಾರೇಜ್ ನಿರ್ಮಾಣದಿಂದ ಮಳೆಗಾಲದಲ್ಲಿ ಹರಿದು ಹೋಗುವ ನೀರನ್ನು ಸಂಗ್ರಹಿಸಿಕೊಳ್ಳಲು ಸಾಧ್ಯವಾಗಲಿದ್ದು, ಅಂತರ್ಜಲ ಮಟ್ಟ ಹೆಚ್ಚಿಸುವುದಕ್ಕೂ ಅನುಕೂಲವಾಗಲಿದೆ. ಇದರಿಂದ ಸುತ್ತಮುತ್ತಲಿನ ಪ್ರದೇಶಗಳ ಕೃಷಿ ಚಟುವಟಿಕೆಗಳಿಗೆ ಮತ್ತಷ್ಟು ಉತ್ತೇಜನ ದೊರೆಯುವ ನಿರೀಕ್ಷೆಯಿದ್ದು, ರೈತರ ಕೃಷಿ ಕಾರ್ಯಗಳಿಗೆ ನೀರಿನ ಸೌಲಭ್ಯ ಕಲ್ಪಿಸುವಲ್ಲಿ ಕಾಮಗಾರಿ ಪ್ರಮುಖ ಪಾತ್ರ ವಹಿಸಲಿದೆ.

ಇದೇ ವೇಳೆ ಮಾತನಾಡಿದ ಶಾಸಕ ಹಂಪನಗೌಡ ಬಾದರ್ಲಿ, ಗ್ರಾಮೀಣ ಭಾಗದ ಜನರ ಮೂಲಭೂತ ಸೌಕರ್ಯಗಳನ್ನು ಸುಧಾರಿಸುವುದು ತಮ್ಮ ಪ್ರಮುಖ ಆದ್ಯತೆಯಾಗಿದೆ. ರಸ್ತೆ, ಸೇತುವೆ, ನೀರಾವರಿ ಸೇರಿದಂತೆ ಜನರಿಗೆ ನೇರವಾಗಿ ಅನುಕೂಲವಾಗುವ ಅಭಿವೃದ್ಧಿ ಕಾಮಗಾರಿಗಳಿಗೆ ನಿರಂತರವಾಗಿ ಆದ–ʼತೆ ನೀಡಲಾಗುತ್ತಿದೆ. ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಅಗತ್ಯ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಲಾಗುವುದು ಎಂದು ತಿಳಿಸಿದರು.

ಈ ಕಾಮಗಾರಿಯಿಂದ ಗ್ರಾಮಸ್ಥರ ಸಂಚಾರಕ್ಕೆ ಅನುಕೂಲ, ನೀರಿನ ಸಂಗ್ರಹಣೆ, ಕೃಷಿಗೆ ಉತ್ತೇಜನ ಹಾಗೂ ರೈತರಿಗೆ ಹೆಚ್ಚಿನ ಪ್ರಯೋಜನ ದೊರೆಯಲಿದ್ದು, ಎಲೆಕೂಡ್ಲಿಗಿ ಗ್ರಾಮದ ಅಭಿವೃದ್ಧಿಯಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ ಎಂದು ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದರು.



## ಜಾಲಹಳ್ಳಿಯಲ್ಲಿ ಗಣೇಶೋತ್ಸವ ಶಾಂತಿಯುತ ಆಚರಣೆಗೆ ಸಿಪಿಐ ಪುಂಡಲೀಕ ಪಾಟತಾರ್ ಕರೆ

❏ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಸಿಪಿಐ ಪುಂಡಲೀಕ ಪಾಟತಾರ್ ಅವರ ನೇತೃತ್ವದಲ್ಲಿ ಗಣೇಶೋತ್ಸವ ಶಾಂತಿ ಸಭೆ ನಡೆಯಿತು.**

ಸಭೆಯಲ್ಲಿ ಮಾತನಾಡಿದ ಸಿಪಿಐ ಪುಂಡಲೀಕ ಪಾಟತಾರ್, ಗಣೇಶೋತ್ಸವವನ್ನು ಶಾಂತಿಯುತವಾಗಿ ಹಾಗೂ ಸೌಹಾರ್ದಯುತವಾಗಿ ಆಚರಿಸುವಂತೆ ಕರೆ ನೀಡಿದರು. ಸರ್ಕಾರದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಗಣೇಶ ಮೂರ್ತಿ ಪ್ರತಿಷ್ಠಾಪನಾ ಸ್ಥಳದಲ್ಲಿ ಕನಿಷ್ಠ ಇಬ್ಬರು ಜವಾಬ್ದಾರಿಯುತ ವ್ಯಕ್ತಿಗಳು ಸದಾ ಇರುವಂತೆ ನೋಡಿಕೊಳ್ಳಬೇಕು. ಭದ್ರತಾ ದೃಷ್ಟಿಯಿಂದ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸೂಚಿಸಿದರು.



ಯುವಕರು ದುಶ್ಚಟ ಹಾಗೂ ಮದ್ಯಪಾನದಿಂದ ದೂರವಿದ್ದು, ಹಬ್ಬದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡಬಾರದು. ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಿ, ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸುವ ಮೂಲಕ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಅವರು ತಿಳಿಸಿದರು.

ಪಿಎಸ್‌ಐ ವೈಶಾಲಿ ಝಳಕಿ, ವಕೀಲ ರಾಜಾವಾಸುದೇವ ನಾಯಕ ಹಾಗೂ ಸಾಬಣ್ಣ ಕಮ್ಮಲದಿನ್ನಿ ಅವರು ಸಭೆಯಲ್ಲಿ ಮಾತನಾಡಿದರು.

ಈ ಸಂದರ್ಭದಲ್ಲಿ ಊರಿನ ಮುಖಂಡರಾದ ಶ್ರೀಧರ್ ದೇಸಾಯಿ, ಶಂಕರಗೌಡ ಪಾಟೀಲ, ಗೋವಿಂದಪ್ಪ ಅಲಗೇರಿ, ದುರುಗಪ್ಪ ರಾಂಪಳ್ಳಿ, ವೆಂಕೋಬ ಪೂಜಾರಿ, ವೆಂಕೋಬ ತೋಟದ್, ಬಾಳಪ್ಪ ಬಾವಿಮನಿ, ಗ್ರಾಮ ಪಂಚಾಯಿತಿ ಸದಸ್ಯ ಬಸವರಾಜ ಗೋಪಾಳಪುರ, ರಂಗಪ್ಪ ತೊಗರಿ, ರಂಗಪ್ಪ ಬಂಡಿ, ರಮೇಶ್ ಬಾವಿಮನಿ, ಮಲ್ಲು ಚಿತಲಕುಂಟಿ, ಅಪ್ಪು ಪಾಟೀಲ್, ರಾಜು ದೊರೆ ಸೇರಿದಂತೆ ಗಣೇಶೋತ್ಸವ ಸಮಿತಿ ಸದಸ್ಯರು, ಗ್ರಾಮಸ್ಥರು ಹಾಗೂ ಪೊಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು. ಪತ್ರಕರ್ತರಾದ ಅಲಿಬಾಬಾ ಪಟೇಲ್, ಗಿರಿಯಪ್ಪ ಪೂಜಾರಿ, ಮಹಾಲಿಂಗ ದೊಡ್ಮನಿ, ನಂದಪ್ಪ ಪಿ. ಮಡ್ಡಿ, ಚನ್ನು ಭವಾನಿ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಕುಷ್ಟಗಿ ತಾಲೂಕು ಬರಪೀಡಿತ ಪ್ರದೇಶವೆಂದು ಘೋಷಿಸಲು ಆಗ್ರಹಿಸಿ ರೈತರ ಪಾದಯಾತ್ರೆ

❏ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ಸಮರ್ಪಕ ಮಳೆಯಾಗದೆ ಬೆಳೆಗಳು ನಷ್ಟವಾಗಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರೂ ಕುಷ್ಟಗಿ ತಾಲೂಕನ್ನು ಬರಪೀಡಿತ ಪ್ರದೇಶಗಳ ಪಟ್ಟಿಗೆ ಸೇರ್ಪಡೆ ಮಾಡದಿರುವುದನ್ನು ಖಂಡಿಸಿ ವಿವಿಧ ಗ್ರಾಮಗಳ ನೂರಾರು ರೈತರು ಎರಡು ದಿನಗಳ ಕಾಲ ಪಾದಯಾತ್ರೆ ನಡೆಸಿ, ಗುರುವಾರ ಪಟ್ಟಣದ ತಹಸೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.**

ಕುಷ್ಟಗಿ ತಾಲೂಕಿನ ಚಳಗೇರಾ, ತಳುವಗೇರಾ, ಶಾಖಾಪುರ, ಬಳೂಟಗಿ ಸೇರಿದಂತೆ ವಿವಿಧ ಗ್ರಾಮಗಳಿಂದ ಪಾದಯಾತ್ರೆ ಮೂಲಕ ಆಗಮಿಸಿದ ರೈತರು ಚಳಗೇರಿ, ಮುದೇನೂರು, ಬನ್ನಿಗೋಳ ಸೇರಿದಂತೆ ವಿವಿಧ ಗ್ರಾಮಗಳ ಮೂಲಕ ಸಾಗಿದರು. ಬಳಿಕ ಕುಷ್ಟಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನೆ ನಡೆಸಿ ತಾಲೂಕು ದಂಡಾಧಿಕಾರಿಗಳ ಕಚೇರಿ ಎದುರು ಸೇರಿದರು. ಕರ್ನಾಟಕ ರಾಜ್ಯ ಪ್ರಾಂತ ಕೂಲಿ ಕಾರ್ಮಿಕರ ರೈತ ಸಂಘದ ಹಿರಿಯ ಹೋರಾಟಗಾರ ಆರ್.ಕೆ. ದೇಸಾಯಿ ಅವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ರೈತಪರ ಹೋರಾಟ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಸೇರಿದಂತೆ ವಿವಿಧ ರೈತಪರ ಸಂಘಟನೆಗಳ ಸಹಯೋಗದಲ್ಲಿ ಪಾದಯಾತ್ರೆ ನಡೆಯಿತು. ಮಳೆ ಕೈಕೊಟ್ಟ ಪರಿಣಾಮ ಬೆಳೆ ನಷ್ಟ, ಆರ್ಥಿಕ ಸಂಕಷ್ಟ ಹಾಗೂ ಜೀವನ ನಿರ್ವಹಣೆಯ ಸಮಸ್ಯೆ ಎದುರಿಸುತ್ತಿರುವ ರೈತರ ಪರಿಸ್ಥಿತಿ ಗಂಭೀರವಾಗಿದೆ.

ಇಂತಹ ಸಂದರ್ಭದಲ್ಲಿ ಕುಷ್ಟಗಿ ತಾಲೂಕನ್ನು ಬರಪೀಡಿತ ಪಟ್ಟಿಯಿಂದ ಕೈಬಿಟ್ಟಿರುವುದು ರೈತರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ ಎಂದು ರೈತ ಮುಖಂಡರು ಹೇಳಿದರು. ಈ ಕುರಿತು ಸ್ಥಳೀಯ ಶಾಸಕರು ಹಾಗೂ ಮಾಜಿ ಶಾಸಕರಿಂದ ವಿಭಿನ್ನ ಹೇಳಿಕೆಗಳು ಬರುತ್ತಿರುವುದು ರೈತರಲ್ಲಿ ಅಸಮಾಧಾನ ಮೂಡಿಸಿದೆ. ಬರ ಘೋಷಣೆಗಾಗಿ ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸಲಾಗುತ್ತಿದೆ ಎಂದು ಶಾಸಕರು ಹೇಳುತ್ತಿದ್ದರೆ, ಅಧಿಕಾರದಲ್ಲಿಲ್ಲದಿದ್ದರೂ ಮುಖ್ಯಮಂತ್ರಿಗಳೊಂದಿಗೆ ಈ ಕುರಿತು ಚರ್ಚಿಸಿರುವುದಾಗಿ ಮಾಜಿ ಶಾಸಕರು ಹೇಳುತ್ತಿದ್ದಾರೆ. ಆದರೆ ರೈತರ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಬೇಕಿದ್ದು, ಬರ ಘೋಷಣೆ ಕುರಿತು ಸರ್ಕಾರ ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕು ಎಂದು ರೈತ ಮುಖಂಡರು ಆಗ್ರಹಿಸಿದರು.

ಈಗಾಗಲೇ ಹಲವು ದಿನಗಳಿಂದ ರೈತ ಸಂಘಟನೆಗಳು ಪ್ರತಿಭಟನೆ, ಧರಣಿ ಸತ್ಯಾಗ್ರಹ, ರಸ್ತೆ ತಡೆ ಹಾಗೂ ಮನವಿ ಸಲ್ಲಿಸುವ ಮೂಲಕ ಸರ್ಕಾರದ ಗಮನ ಸೆಳೆಯುತ್ತಿವೆ. ಆದರೂ ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡದಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.




ವರದಿ ಬಹಿರಂಗಪಡಿಸಲು ಆಗ್ರಹ

ತಹಸೀಲ್ದಾರ್ ಹಾಗೂ ತಾಲೂಕು ಕೃಷಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ರೈತ ಮುಖಂಡರು, ಕುಷ್ಟಗಿ ತಾಲೂಕಿನ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವಂತೆ ಒತ್ತಾಯಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದ ಬರ ಅಧ್ಯಯನ ತಂಡ ತಾಲೂಕಿನ ಕೆಲವು ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಈ ಸಂದರ್ಭದಲ್ಲಿ ವಾಸ್ತವ ಪರಿಸ್ಥಿತಿ ಕುರಿತು ಸರ್ಕಾರಕ್ಕೆ ಯಾವ ರೀತಿಯ ವರದಿ ಸಲ್ಲಿಸಲಾಗಿದೆ ಎಂಬುದನ್ನು ರೈತರಿಗೆ ತಿಳಿಸಬೇಕು. ವರದಿಯನ್ನು ಸಾರ್ವಜನಿಕವಾಗಿ ಪ್ರಕಟಿಸಿ, ಅದರ ಆಧಾರದ ಮೇಲೆ ಕುಷ್ಟಗಿ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು ಎಂದು ಒತ್ತಾಯಿಸಿದರು. ರೈತರ ಬೆಳೆ ನಷ್ಟ ಹಾಗೂ ಬರ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ರೈತ ಸಂಘಟನೆಗಳ ಮುಖಂಡರು ಎಚ್ಚರಿಸಿದರು.

# ಜಾಲಹಳ್ಳಿಯಲ್ಲಿ ಜಗದಾರಾಧ್ಯ ಜಯಶಾಂತಲಿಂಗೇಶ್ವರ ಜಯಂತೋತ್ಸವ

### ಜಕ್ಕಲಿ ಅಣ್ಣಯ್ಯ?ತಮ್ಮಯ್ಯ ಶರಣರ ಪುರಾಣ ಮಹಾಮಂಗಲೋತ್ಸವ ಮಠಮಾನ್ಯಗಳ ಉಳಿವು ಹಾಗೂ ಧಾರ್ಮಿಕ ಪರಂಪರೆ ಬೆಳೆಸಲು ಎಲ್ಲರೂ ಕೈಜೋಡಿಸಬೇಕು: ಶಾಸಕಿ ಕರೇಮ್ಮ ಜಿ. ನಾಯಕ

❏ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿಯಲ್ಲಿ ಶ್ರೀ ಜಗದಾರಾಧ್ಯ ಜಯಶಾಂತಲಿಂಗೇಶ್ವರ ಜಯಂತೋತ್ಸವ ಹಾಗೂ ಜಕ್ಕಲಿ ಅಣ್ಣಯ್ಯ?ತಮ್ಮಯ್ಯ ಶರಣರ ಪುರಾಣ ಮಹಾಮಂಗಲೋತ್ಸವದ ಅಂಗವಾಗಿ ಧಾರ್ಮಿಕ ಕಾರ್ಯಕ್ರಮವು ಶ್ರದ್ಧಾಭಕ್ತಿಯಿಂದ ನಡೆಯಿತು.**

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ದೇವದುರ್ಗ ಶಾಸಕಿ ಕರೇಮ್ಮ ಜಿ. ನಾಯಕ, "ಜಾಲಹಳ್ಳಿಯ ಪುಣ್ಯಭೂಮಿಯಲ್ಲಿ ಶ್ರೀ ಜಗದಾರಾಧ್ಯ ಜಯಶಾಂತಲಿಂಗೇಶ್ವರ ದೇವರು ನೆಲೆಸಿರುವುದು ನಮ್ಮೆಲ್ಲರ ಪುಣ್ಯ. ಇದೇ ಜಾಲಹಳ್ಳಿ ನೆಲದಲ್ಲಿ ಕಾಶಿ ಜಗದ್ಗುರುಗಳು ಜನಿಸಿರುವುದು ಗ್ರಾಮದ ಆಧ್ಯಾತ್ಮಿಕ ಪರಂಪರೆಗೆ ಹೆಮ್ಮೆಯ ಸಂಗತಿಯಾಗಿದೆ," ಎಂದರು.

"ಗುರುಗಳ ಆಶೀರ್ವಾದದಿಂದ ಶಾಸಕಿಯಾಗಿ ಜನಸೇವೆ ಮಾಡುವ ಅವಕಾಶ ದೊರೆತಿದೆ. ದೇವದುರ್ಗ ತಾಲೂಕಿನ ಜನರೇ ನನ್ನ ಪಾಲಿನ ದೇವರು. ಅವರ ಸೇವೆ ಮಾಡುವುದೇ ನನ್ನ ಮುಖ್ಯ ಉದ್ದೇಶವಾಗಿದೆ," ಎಂದು ಶಾಸಕಿ ತಿಳಿಸಿದರು.



ಪುರಾಣ ಪ್ರವಚನ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಮನುಷ್ಯನಿಗೆ ಆಧ್ಯಾತ್ಮಿಕ ಜ್ಞಾನ ನೀಡುವುದರ ಜೊತೆಗೆ ಮಾನಸಿಕ ನೆಮ್ಮದಿಯನ್ನೂ ಒದಗಿಸುತ್ತವೆ. ಪುರಾಣ ಕಥೆಗಳನ್ನು ಕೇಳುವ ಅವಕಾಶ ದೊರೆಯುವುದಕ್ಕೂ ಪುಣ್ಯ ಮಾಡಿರಬೇಕು. ಇಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಉತ್ತಮ ಸಂಸ್ಕಾರ ಬೆಳೆಸಲು ಸಹಕಾರಿಯಾಗುತ್ತವೆ ಎಂದು ಹೇಳಿದರು.

ಪುಣ್ಯ?ಪಾಪದ ಕುರಿತು ಮಾತನಾಡಿದ ಶಾಸಕಿ, ಯಾವುದೇ ಪ್ರತಿಫಲದ ನಿರೀಕ್ಷೆಯಿಲ್ಲದೆ ನಿಸ್ವಾರ್ಥ ಮನೋಭಾವದಿಂದ ಮಾಡುವ ದಾನ?ಧರ್ಮ ಹಾಗೂ ಸೇವೆಗೆ ಹೆಚ್ಚಿನ ಮಹತ್ವವಿದೆ. ಪ್ರತಿಫಲದ ನಿರೀಕ್ಷೆಯಿಂದ ಮಾಡುವ ದಾನ?ಧರ್ಮಕ್ಕೆ ನಿಜವಾದ ಸಾರ್ಥಕತೆ ದೊರೆಯುವುದಿಲ್ಲ ಎಂದು ಹೇಳಿದರು. ನಮ್ಮ ನಾಡಿನ ಸಂಸ್ಕೃತಿ, ಪರಂಪರೆ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವಲ್ಲಿ ಮಠಮಾನ್ಯಗಳು ಮಹತ್ವದ ಪಾತ್ರ ವಹಿಸುತ್ತಿವೆ. ಆದ್ದರಿಂದ ಮಠಮಾನ್ಯಗಳನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಕರೆ ನೀಡಿದರು. ಗುರುಗಳ ಆಶೀರ್ವಾದದಿಂದ ದೇವದುರ್ಗ ತಾಲೂಕಿನ ಜನರ ಸಮಸ್ಯೆಗಳು ಬಗೆಹರಿದು, ತಾಲೂಕು ಅಭಿವೃದ್ಧಿಯತ್ತ ಸಾಗಲಿ ಎಂದು ಆಶಿಸಿದ ಶಾಸಕಿ, ತಾಲೂಕಿನ ಜನರ ಸುಖ?ಸಮೃದ್ಧಿಗಾಗಿ ಸದಾ ಪ್ರಾಮಾಣಿಕವಾಗಿ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ಧಾರ್ಮಿಕ ಸಾನಿಧ್ಯ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಶ್ರೀ ಜಗದಾರಾಧ್ಯ ಜಯಶಾಂತಲಿಂಗೇಶ್ವರ ಮಹಾಸ್ವಾಮಿಗಳು ವಹಿಸಿದ್ದರು. ಕಾರ್ಯಕ್ರಮವನ್ನು ಶ್ರೀ ಷ.ಬ್ರ. ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು, ಹಿರೇಮಠ ನಿಲೋಗಲ್ ಹಾಗೂ ಶ್ರೀ ಷ.ಬ್ರ. ಕಪಿಲಸಿದ್ಧರಾಮ ಶಿವಾಚಾರ್ಯ ಮಹಾಸ್ವಾಮಿಗಳು, ಶಿಬಿರಮಠ ದೇವದುರ್ಗ ಅವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಪರಮಪೂಜ್ಯ ಶ್ರೀ ಷ.ಬ್ರ. ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು (ಹಿರೇಮಠ, ಗುಂಡಕನಾಳ), ಶ್ರೀ ಷ.ಬ್ರ. ರಾಚೋಟೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು (ಸೋಮವಾರಪೇಟೆ ಹಿರೇಮಠ, ರಾಯಚೂರು), ಶ್ರೀ ಹುಚ್ಚೇಶ್ವರ ಸ್ವಾಮಿಗಳು (ಶ್ರೀ ರಾಮಲಿಂಗೇಶ್ವರ ಮಠ, ಗುಳಬಾಳ), ಶ್ರೀ ಷ.ಬ್ರ. ಶಂಭುಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಸೇರಿದಂತೆ ವಿವಿಧ ಮಠಗಳ ಶ್ರೀಗಳು ಉಪಸ್ಥಿತರಿದ್ದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹನುಮಂತಿ ರಾಂಪಳ್ಳಿ, ಸಿ.ಎಸ್. ಪಾಟೀಲ್, ಚಂದ್ರಶೇಖರ ಪಾಟೀಲ ಮಿಯ್ಯಾಪುರ, ಜೆಡಿ–ಎಸ್ ತಾಲೂಕು ಅಧ್ಯಕ್ಷ ಬಸವನಗೌಡ ದೇಸಾಯಿ, ಈರಣ್ಣ ಪಾಣಿ, ಬಸವನಗೌಡ ಪಾಟೀಲ್, ಸಂಗಯ್ಯ ತಾತ ಸೇರಿದಂತೆ ಮುಖಂಡರು, ಭಕ್ತರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು. ಪುರಾಣ ಪ್ರವಚನವನ್ನು ಭಕ್ತರು ಶ್ರದ್ಧಾಭಕ್ತಿಯಿಂದಆಲಿಸಿದರು. ಕಾರ್ಯಕ್ರಮವನ್ನು ಜಾಲಹಳ್ಳಿಯ ಜೆ.ಜೆ. ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಶಾಂತಮ್ಮ ಪಾಟೀಲ ಹಾಗೂ ಜೆ.ಜೆ. ಪ್ರೌಢಶಾಲೆಯ ಶಿಕ್ಷಕ ಗುಡ್ಡಪ್ಪ ಬಿ. ನಿರೂಪಿಸಿದರು.

## ನೇಮಕಾತಿ ಪ್ರಕಟಣೆ


**KEA ನೇಮಕಾತಿ 2026 – 210 ಗ್ರೂಪ್–ಸಿ (ನೀರು ಸರಬರಾಜು ನಿರ್ವಾಹಕ, ಎಲೆಕ್ಟ್ರಿಷಿಯನ್) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸೆಪ್ಟೆಂಬರ್ 12, 2026**

KEA ನೇಮಕಾತಿ 2026: 210 ಗ್ರೂಪ್–ಸಿ (ನೀರು ಸರಬರಾಜು ನಿರ್ವಾಹಕ, ಎಲೆಕ್ಟ್ರಿಷಿಯನ್) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಗ್ರೂಪ್–ಸಿ (ನೀರು ಸರಬರಾಜು ನಿರ್ವಾಹಕ, ಎಲೆಕ್ಟ್ರಿಷಿಯನ್) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30–ಸೆಪ್ಟೆಂಬರ್–2026 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: cetonline. karnataka.gov.in

## ಶ್ರಾವಣಮಾಸದ ಭಾದ್ರಪದ ಅಮಾವಾಸ್ಯೆದಂದು ನಡೆದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು

❑ ನೈಜ್ಯ ದೆಸೆ ನ್ಯೂಸ್

=ಬಳ್ಳಾರಿ / ಕಂಪ್ಲಿ : ಭಾದ್ರಪದ ಅಮಾವಾಸ್ಯೆ ಪ್ರಯುಕ್ತ ತಾಲೂಕಿನ ದೇವಸ್ಥಾನಗಳಲ್ಲಿ ಭಜನೆ, ವಿಶೇಷ ಪೂಜೆ ಸೇರಿದಂತೆ ನಾನಾ ಧಾರ್ಮಿಕ ಕಾರ್ಯಕ್ರಮಗಳು ಅತ್ಯಂತ ಶ್ರದ್ದಾಭಕ್ತಿಯಿಂದ ಶುಕ್ರವಾರ ನೆರವೇರಿದವು.



ಸ್ಥಳೀಯ ಐತಿಹಾಸಿಕ ಸೋಮಪ್ಪ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಲಂಕಾರ, ಮಹಾಮಂಗಳಾರತಿ ಹಾಗೂ ವಿವಿಧ ಧಾರ್ಮಿಕ ಕಾರ್ಯಗಳು ಶಾಶ್ತೋತ್ರವಾಗಿ ನಡೆದವು. ಇಲ್ಲಿನ ಸೋಮಪ್ಪ ದೇವಸ್ಥಾನದಲ್ಲಿ ನೂರಾರು ಸಂಖ್ಯೆಯಲ್ಲಿ ಆಗಮಿಸಿ, ಭಕ್ತರು ಕಾಯಿ, ಕರ್ಪೂರ ಅರ್ಪಿಸಿ, ದೇವರ ದರ್ಶನ ಪಡೆದು ಪುನೀರಾದರು. ಮತ್ತು ಇಷ್ಟಾರ್ಥ–ರ್ಿ ಸಿದ್ಧಿಗಾಗಿ ಬೇಡಿದರು. ನಂತರ ಪ್ರಸಾದ ಸ್ವೀಕರಿಸಿದರು. ಇಲ್ಲಿನ ಪೇಟೆ ಬಸವೇಶ್ವರ, ಗ್ರಾಮ ದೇವತೆ ಮಾರೆಮ್ಮ, ಆಂಜನೇಯ್ಯ, ಕಂಪ್ಲಿ–ಕೋಟೆಯ ಐತಿಹಾಸಿಕ ಪಂಪಾಪತಿ ದೇವಸ್ಥಾನ, ಸಕ್ಕರೆ ಕಾರ್ಖಾನೆಯ ಕಾಳಿಕಾ ದೇವಸ್ಥಾನ ಸೇರಿದಂತೆ ನಾನಾ ಭಾಗದಲ್ಲಿರುವ ದೇವಸ್ಥಾನದಲ್ಲಿ ಶ್ರಾವಣಮಾಸದ ಭಾದ್ರಪದ ಅಮಾವಾಸ್ಯೆಯ ದಿನದಂದಯ ಧಾರ್ಮಿಕ ಕೈಂಕಾರ್ಯಗಳನ್ನು ಶ್ರದ್ಧೆಯಿಂದ ಪೂರೈಯಿಸಿದರು. ಪಟ್ಟಣದ ಸತ್ಯನಾರಾಯಣ ಪೇಟೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಶಾಖಾ ಮಠದಲ್ಲಿ ರಾಯತ ಮೃತ್ತಿಕಾ ಬೃಂದಾವನವನ್ನು ವಿಶೇಷವಾಗಿ ಅಲಂಕರಿಸಿ ಪೂಜಿಸಿದರು. ತಾಲೂಕಿನ ಸಣಾಪುರದ ಉದ್ಭವ ವೀರಭದ್ರೇಶ್ವರ ದೇವಸ್ಥಾನದಲ್ಲಿ ಅಲಂಕಾರ, ಅಭಿಷೇಕ, ಮಹಾಮಂಗಳಾರತಿ ಸೇರಿದಂತೆ ಪೂಜಾ ಪುನಸ್ಕಾರಗಳು ಭಕ್ತರು ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿದವು. ತದನಂತರ ಅನ್ನ ಸಂತಾರ್ಪಣೆ ಏರ್ಪಡಿಸಲಾಗಿತ್ತು. ಸಮೀಪದ ಬುಕ್ಕಸಾಗರದ ಏಳು ಹೆಡೆ ನಾಗಪ್ಪ ದೇವಸ್ಥಾನದಲ್ಲಿ ಅಮಾವಾಸ್ಯೆ ನಿಮಿತ್ಯ ನಾಗಪ್ಪ ದೇವ–ರಿಗೆ ಹೂವಿನ ಅಲಂಕಾರ ಮಾಡಲಾಗಿತ್ತು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ದೇವರ ದರ್ಶನ ಪಡೆದುಕೊಂಡರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಹೊಸೂರು ಸಿದ್ದಾಪುರದಲ್ಲಿ ಹೋಬಳಿ ಮಟ್ಟದ 'ಪ್ರಜಾಸೇವೆ ಆಂದೋಲನ–2026 ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ" ಘೋಷವಾಕ್ಯ

❑ ನೈಜ್ಯ ದೆಸೆ ನ್ಯೂಸ್



ಹೊಸೂರು: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಹೊಸೂರು ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ತಾಲ್ಲೂಕು ಆಡಳಿತ ಹಾಗೂ ತಾಲ್ಲೂಕು ಪಂಚಾಯಿತಿ ದೇವದುರ್ಗ ಇವರ ಸಂಂ–ಯುಕ್ತಾಶ್ರಯದಲ್ಲಿ ಹೋಬಳಿ ಮಟ್ಟದ 'ಪ್ರಜಾಸೇವೆ ಆಂದೋಲನ 2026' ಕಾರ್ಯಕ್ರಮ ನಡೆಯಿತು.

"ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ" ಎಂಬ ಘೋಷವಾಕ್ಯದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ ಅವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕಿ ಕರೆಮ್ಮ ಜಿ. ನಾಯಕ ಅವರು, ಸರ್ಕಾರದ ವಿವಿಧ ಯೋಜನೆಗಳು ಹಾಗೂ ಸೇವೆಗಳನ್ನು ಸಾರ್ವಜನಿಕರ ಮನೆ ಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಪ್ರಜಾಸೇವೆ ಆಂದೋಲನ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಹೇಳಿದರು.

ಆಂದೋಲನದಲ್ಲಿ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ, ರಸ್ತೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ, ಶುದ್ಧ ಕುಡಿಯುವ ನೀರು, ಸ್ವಚ್ಛ ಗ್ರಾಮ?ಸುಂದರ ಗ್ರಾಮ, ಸಾಮಾಜಿಕ ಭದ್ರತಾ ಯೋಜನೆಗಳು, ವೃದ್ಧಾಪ್ಯ?ವಿಧವಾ?ವಿಕಲಚೇತನರ ಪಿಂಚಣಿ, ರೇಷನ್ ಕಾರ್ಡ್‌ಗೆ ಸಂಬಂಧಿಸಿದ ಸೇವೆಗಳು, ರೈತರಿಗೆ ವಿವಿಧ ಸೌಲಭ್ಯಗಳು ಸೇರಿದಂತೆ ಹಲವು ಸರ್ಕಾರಿ ಸೇವೆಗಳನ್ನು ಒದಗಿಸಲಾಯಿತು.

ಸಾರ್ವಜನಿಕರು ತಮ್ಮ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸಿ, ಸ್ಥಳದಲ್ಲಿಯೇ ಮಾಹಿತಿ ಹಾಗೂ ಪರಿಹಾರ ಪಡೆಯಲು ಮುಂದಾದರು.

ಜಾಲಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಮನವಿ ಇದೇ ಸಂದರ್ಭದಲ್ಲಿ ಜಾಲಹಳ್ಳಿ ಗ್ರಾಮ ಪಂಚಾಯಿತಿಯ ಮಾಜಿ ಸದಸ್ಯರಾದ ಬುಡ್ಡಪ್ಪ ಕಾವಲಿ ಅವರು, ದೇವದುರ್ಗ ತಾಲೂಕಿನ ಪ್ರಮುಖ ಹಾಗೂ ಅತಿ ದೊಡ್ಡ ಪಟ್ಟಣಗಳಲ್ಲಿ ಒಂದಾಗಿರುವ ಜಾಲಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಶಾಸಕಿ ಕರೆಮ್ಮ ಜಿ. ನಾಯಕ ಅವರಿಗೆ ಮನವಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ನಾಗಮ್ಮ ಕಟ್ಟಿಮನಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ರಾಜೇಂದ್ರ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ರಾಧಾದೇವಿ, ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ವೈಶಾಲಿ ಜಳಕಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಸ್ಥಳೀಯ ಸಾರ್ವಜನಿಕರು ಉಪಸ್ಥಿತರಿದ್ದರು.

# ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ಹೆಜ್ಜೆ ಶಾಸಕ ಹಂಪನಗೌಡ ಬಾದರ್ಲಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರು ವಿಧಾನಸಭಾ ಕ್ಷೇತ್ರದ ಗೊರೆಬಾಳ ಗ್ರಾಮದಲ್ಲಿ ಪ್ರವಾಸೋದ್ಯಮ ಇಲಾಖೆಯ ಯೋಜನೆಯಡಿ ?74 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ನೂತನ ಯಾತ್ರಿನಿವಾಸ ಕಟ್ಟಡಕ್ಕೆ ಕ್ಷೇತ್ರದ ಜನಪ್ರಿಯ ಶಾಸಕ ಶ್ರೀ ಹಂಪನಗೌಡ ಬಾದರ್ಲಿ ಸಾಹೇಬರು ಶಂಕುಸ್ಥಾಪನೆ ನೆರವೇರಿಸಿದರು.**

ಗೊರೆಬಾಳ ಗ್ರಾಮಕ್ಕೆ ಆಗಮಿಸುವ ಯಾತ್ರಿಕರು, ಪ್ರವಾಸಿಗರು ಹಾಗೂ ಸಾರ್ವಜನಿಕ–ರಿಗೆ ಉತ್ತಮ ವಸತಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಈ ಯಾತ್ರಿನಿವಾಸವನ್ನು ನಿರ್ಮಿಸಲಾಗುತ್ತಿದೆ. ಗ್ರಾಮದಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಉತ್ತೇಜನ ನೀಡುವುದರ ಜೊತೆಗೆ, ಸ್ಥಳೀಯವಾಗಿ ಮೂಲಸೌಕರ್ಯಗಳ ಅಭಿವೃದ್ಧಿಗೂ ಈ ಕಾಮಗಾರಿ ಸಹಕಾರಿಯಾಗಲಿದೆ. ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಶಾಸಕ ಹಂಪನಗೌಡ ಬಾದರ್ಲಿ ಅವರು, ಕ್ಷೇತ್ರದ ಪ್ರತಿಯೊಂದು ಗ್ರಾಮದಲ್ಲಿಯೂ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಿ ಸಮಗ್ರ ಅಭಿವೃದ್ಧಿ ಕೈಗೊಳ್ಳುವುದು ತಮ್ಮ ಪ್ರಮುಖ ಆದ್ಯತೆಯಾಗಿದೆ ಎಂದು ಹೇಳಿದರು. ಗೊರೆಬಾಳ ಗ್ರಾಮದಲ್ಲಿ ನಿರ್ಮಾಣಗೊಳ್ಳಲಿರುವ ಯಾತ್ರಿನಿವಾಸವು ಯಾತ್ರಿಕರು ಮತ್ತು ಪ್ರವಾಸಿಗರಿಗೆ ಅನುಕೂಲ ಕಲ್ಪಿಸುವುದರೊಂದಿಗೆ ಗ್ರಾಮದ ಪ್ರವಾಸೋದ್ಯಮ ಅಭಿವೃದ್ಧಿಗೆ ಮತ್ತಷ್ಟು ವೇಗ ನೀಡಲಿದೆ ಎಂದು ತಿಳಿಸಿದರು.

ಯಾತ್ರಿನಿವಾಸ ನಿರ್ಮಾಣದಿಂದ ಹೊರ ಜಿಲ್ಲೆ ಹಾಗೂ ವಿವಿಧ ಪ್ರದೇಶಗಳಿಂದ ಆಗಮಿಸುವ ಪ್ರವಾಸಿಗರು ಮತ್ತು ಯಾತ್ರಿಕ–ರಿಗೆ ಅನುಕೂಲಕರ ವಸತಿ ಸೌಲಭ್ಯ ದೊರೆಯಲಿದೆ. ಇದರಿಂದ ಗೊರೆಬಾಳ ಗ್ರಾಮದ ಪ್ರವಾಸೋದ್ಯಮ ಸಾಮರ್ಥ್ಯ ಹೆಚ್ಚುವುದರ ಜೊತೆಗೆ, ಸ್ಥಳೀಯ ವ್ಯಾಪಾರ–ವಹಿವಾಟು ಹಾಗೂ ಆರ್ಥಿಕ ಚಟುವಟಿ–ಕೆಗಳಿಗೂ ಉತ್ತೇಜನ ಸಿಗುವ ನಿರೀಕ್ಷೆಯಿದೆ.



ಸಾರ್ವಜನಿಕರ ಅಗತ್ಯತೆಗಳನ್ನು ಗುರುತಿಸಿ, ಸರ್ಕಾರದ ವಿವಿಧ ಇಲಾಖೆಗಳ ಯೋಜನೆಗಳನ್ನು ಕ್ಷೇತ್ರಕ್ಕೆ ತರುವ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿಯೂ ನಗರ ಪ್ರದೇಶಗಳಿಗೆ ಸಮಾನವಾದ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಶಾಸಕರು ಹೇಳಿದರು.

ಈ ಸಂದರ್ಭದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು, ಮುಖಂಡರು, ಗ್ರಾಮಸ್ಥರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. "ಜನಹಿತವೇ ನಮ್ಮ ಸಂಕಲ್ಪ ಅಭಿವೃದ್ಧಿಯೇ ನಮ್ಮ ಗುರಿ"

# ಪಗಡದಿನ್ನಿ ಗ್ರಾಮದಲ್ಲಿ ಕೆಪಿಎಸ್ ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ

## ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವುದು ನಮ್ಮ ಸಂಕಲ್ಪ: ಶಾಸಕ ಹಂಪನಗೌಡ ಬಾದರ್ಲಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಗ್ರಾಮೀಣ ಭಾಗದ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಹಾಗೂ ಅತ್ಯುತ್ತಮ ಶೈಕ್ಷಣಿಕ ಸೌಲಭ್ಯಗಳು ದೊರೆಯಬೇಕು ಎಂಬ ಉದ್ದೇಶದೊಂದಿಗೆ ಪಗಡದಿನ್ನಿ ಗ್ರಾಮದಲ್ಲಿ ನೂತನ ಕೆಪಿಎಸ್ (ಕರ್ನಾಟಕ ಪಬ್ಲಿಕ್ ಸ್ಕೂಲ್) ಶಾಲೆಯ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಸಿಂಧನೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಶ್ರೀ ಹಂಪನಗೌಡ ಬಾದರ್ಲಿ ಸಾಹೇಬರು ಚಾಲನೆ ನೀಡಿದರು.**

ಈ ಸಂದರ್ಭದಲ್ಲಿ ಶಾಲಾ ಪ್ರಾರಂಭೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಾಸಕರು, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉತ್ತಮ ಶಿಕ್ಷಣದ ಅವಕಾಶಗಳನ್ನು ಕಲ್ಪಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಹೇಳಿದರು.




ಶಿಕ್ಷಣವು ಪ್ರತಿಯೊಬ್ಬ ಮಗುವಿನ ಭವಿಷ್ಯವನ್ನು ರೂಪಿಸುವ ಪ್ರಮುಖ ಶಕ್ತಿಯಾಗಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೂ ನಗರ ಪ್ರದೇಶದ ವಿದ್ಯಾರ್ಥಿಗಳಂತೆ ಗುಣಮಟ್ಟದ ಶಿಕ್ಷಣ ಹಾಗೂ ಅಗತ್ಯ ಶೈಕ್ಷಣಿಕ ಸೌಲಭ್ಯಗಳು ದೊರೆಯುವಂತಾಗಬೇಕು ಎಂದರು.

ಕೆಪಿಎಸ್ ಶಾಲೆಯ ಆರಂಭದಿಂದ ಪಗಡದಿನ್ನಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ವಿದ್ಯಾರ್ಥಿಗಳಿಗೆ ತಮ್ಮ ಊರಿನಲ್ಲಿಯೇ ಉತ್ತಮ ಶಿಕ್ಷಣ ಪಡೆಯಲು ಅವಕಾಶ ದೊರೆಯಲಿದೆ. ಇದರಿಂದ ದೂರದ ಊರುಗಳಿಗೆ ತೆರಳಿ ಶಿಕ್ಷಣ ಪಡೆಯಬೇಕಾದ ವಿದ್ಯಾರ್ಥಿಗಳು ಹಾಗೂ ಪೋಷಕರ ಮೇಲಿನ ಒತ್ತಡವೂ ಕಡಿಮೆಯಾಗಲಿದೆ. ಶಾಲೆಯಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಾಣವಾಗುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಮತ್ತಷ್ಟು ಸಹಕಾರಿಯಾಗಲಿದೆ ಎಂದು ಶಾಸಕರು ಅಭಿಪ್ರಾಯಪಟ್ಟರು.

"ಗ್ರಾಮೀಣ ಭಾಗದ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದಾಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯ. ಶಿಕ್ಷಣದ ಮೂಲಕ ಮಕ್ಕಳಲ್ಲಿ ಜ್ಞಾನ, ಕೌಶಲ್ಯ ಹಾಗೂ ಆತ್ಮವಿಶ್ವಾಸ ಬೆಳೆಸಿ, ಅವರನ್ನು ಭವಿಷ್ಯದ ಉತ್ತಮ ನಾಗರಿಕರನ್ನಾಗಿ ರೂಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ" ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುತ್ತಿರುವ ಶಾಸಕರು, ಕ್ಷೇತ್ರದ ಗ್ರಾಮೀಣ ಪ್ರದೇಶಗಳಲ್ಲಿಯೂ ಶಾಲಾ ಮೂಲಸೌಕರ್ಯ, ಶೈಕ್ಷಣಿಕ ಸೌಲಭ್ಯಗಳು ಹಾಗೂ ವಿದ್ಯಾರ್ಥಿಗಳಿಗೆ ಅಗತ್ಯವಾದ ವ್ಯವಸ್ಥೆಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸಲಾಗುತ್ತಿದೆ ಎಂದು ತಿಳಿಸಿದರು.

ಪಗಡದಿನ್ನಿ ಗ್ರಾಮದಲ್ಲಿ ಕೆಪಿಎಸ್ ಶಾಲೆ ಆರಂಭಗೊಂಡಿರುವುದು ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳಲ್ಲಿ ಸಂತಸ ಮೂಡಿಸಿದ್ದು, ಈ ಶೈಕ್ಷಣಿಕ ಸಂಸ್ಥೆ ಮುಂದಿನ ದಿನಗಳಲ್ಲಿ ಅನೇಕ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಜ್ಞಾನ ದೇಗುಲವಾಗಿ ಬೆಳೆಯಲಿ ಎಂಬ ಆಶಯವನ್ನು ಗ್ರಾಮಸ್ಥರು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು, ಗ್ರಾಮಸ್ಥರು, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

# ಬೆವರ ಹನಿಗೆ ಸಿಗದ ಬೆಲೆ: ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಆಟ, ರಸ್ತೆಯುದ್ದಕ್ಕೂ ಬದನೆಕಾಯಿ ರಾಶಿ! ಮಾರುಕಟ್ಟೆಗಳಲ್ಲಿ ಬೆಲೆ ಪಾತಾಳಕ್ಕೆ, ಅನ್ನದಾತನ ಆಕ್ರೋಶ ಮುಗಿಲಿಗೆ!

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಮುಂಗಾರು ಮಳೆ ಕೈಕೊಟ್ಟ ನಂತರದಲ್ಲಿ ರೈತರು ಪರ್ಯಾಸ ಬೆಳೆಗಳಲ್ಲಿ ಒಂದಾದ ತೋಟಗಾರಿಕೆ ಬೆಳೆಯತ್ತ ಸಾಗಿದ ರೈತ ಬದನೆಕಾಯಿ ಬೆಳೆದು ಕೈಸುಟ್ಟುಕೊಂಡಿದ್ದಾರೆ.**

ಒಂದೇ ಬೆಳೆ ಬೆಳೆಯದೇ, ತೋಟಗಾ–ರಿಕೆ ಬೆಳೆಯತ್ತ ಮುಖ ಮಾಡಿದ ರೈತ ಬದನೇಕಾಯಿ ಬೆಳೆ ಉತ್ತಮ ಇಳುವರಿ ನೀಡಿದರೂ, ಮಾರುಕಟ್ಟೆಯಲ್ಲಿ ಬೆಂಬಲ ಬೆಲೆ ಇಲ್ಲದ ಪರಿಣಾಮ ನಷ್ಟದ ಸಂಕಷ್ಟಕ್ಕೆ ದೂಡಿದೆ. ಹೌದು, ಕಂಪ್ಲಿ ತಾಲೂಕು ವ್ಯಾಪ್ತಿಯ ನೆಲ್ಲುಡಿ ಗ್ರಾಪಂಯ ಹೊಸ ನೆಲ್ಲುಡಿ ಗ್ರಾಮದ ರೈತ ಟಿ.ಪಕ್ಕಿರೆಡ್ಡಿ ಎಂಬುವರ ಗುತ್ತಿಗೆ ಆಧಾ–ರಿತ ಜಮೀನಿನಲ್ಲಿ ಬೆಳೆಗೆ ಬೆಳೆಗೆ ಉತ್ತಮ ಬೆಲೆ ಸಿಗದ ಹಿನ್ನಲೆ ರಸ್ತೆ ಹಾಗೂ ಕಸದ ಬುಟ್ಟಿಗೆ ಚೆಲ್ಲುವಂತಾಗಿದೆ. 1 ವರೆ ಎಕರೆ ಪ್ರದೇಶದಲ್ಲಿ ಬೋರ್‌ವೆಲ್ ಆಶ್ರಯದಲ್ಲಿ ಬದನೇಕಾಯಿ ಬೆಳೆಯನ್ನು ಮೇ ತಿಂಗಳ ಕೊನೆವಾರದಲ್ಲಿ ನಾಟಿ ಮಾಡಿದ್ದಾರೆ. ಆಂಧ್ರದ ಅನಂತಪುರದಿಂದ ನರ್ಸರಿಯನ್ನು ಒಂದು ಸಸಿಗೆ 35 ಪೈಸೆಯಂತೆ 1 ವರೆ ಎಕರೆಗೆ 270 ಟ್ರಯ್‌ಗೆ ಒಟ್ಟು 9450 ರೂ. ಮೌಲ್ಯದ ಸುಮಾರು 27 ಸಾವಿರ ಸಸಿಗಳನ್ನು ತಂದು ನಾಟಿ ಮಾಡಿದ್ದಾರೆ. ಎರಡುವರೆ ತಿಂಗಳಲ್ಲಿ ಉತ್ತಮ ಫಸಲು ಬಂದಿತ್ತಾದರೂ, ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಬೇಕಾಬಿಟ್ಟಿಯ




ದರಕ್ಕೆ ಬದನೇಕಾಯಿ ಭಾರವಾಗಿ ಪರಿಣಮಿಸಿದೆ.

ಮೊದಲ ಹಂತದಲ್ಲಿ 6–7 ಚೀಲಗಳಷ್ಟು ಬದನೇಕಾಯಿ ಫಸಲು ಬಂದಿದೆ. ಆದರೆ, ಮಾರುಕಟ್ಟೆಯಲ್ಲಿ ಬೆಂಬಲ ಬೆಲೆ ಇಲ್ಲಂತಾಗಿದೆ. ಇದರಿಂದ ಸಂಕಷ್ಟ ಎದು–ರಿಸುವಂತಾಗಿದ್ದು, ಇನ್ನೇನು ಫಸಲಿಗೆ ಉತ್ತಮ ದರ ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದ ರೈತನಿಗೆ ಅದೇ ದರದಲ್ಲಿ ಮಾರುಕಟ್ಟೆಗೆ ಸಾಗಿಸಬೇಕಾಗಿದೆ. ಒಂದು ಚೀಲದಲ್ಲಿ 35 ಕೆ.ಜಿಯಷ್ಟು ಬದನೆಕಾಯಿ ತುಂಬಲಾಗುತ್ತದೆ. ಅದರಂತೆ ಆರೇಳೂ ಚೀಲದಲ್ಲಿ 245 ಕೆ.ಜಿ ಬದನೆಕಾಯಿ ಬರುತ್ತದೆ. ಆದರೆ, ಸಂತೆ ಮಾರುಕಟ್ಟೆಯಲ್ಲಿ ಬರೀ 10 ರೂ.ಗೆ 2450ಗೆ ಕೊಟ್ಟು ಬರುವುದಾಗಿದೆ.

ಇದರಿಂದ ರೈತರಿಗೆ ನಷ್ಟ ಎದುರಾಗಿದ್ದು, ತೋಟಗಾರಿಕೆ ಬೇಡ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ದಲ್ಲಾಳಿಗೆ ಲಾಭ, ರೈತರಿಗೆ ನಷ್ಟ : ತುಂಗಭದ್ರ ಬಲದಂಡೆಯಲ್ಲಿ ಅತಿ ಹೆಚ್ಚಾಗಿ ಭತ್ತ, ಮೆಣಸಿನಕಾಯಿ ಬೆಳೆಯುವುದು ಹೆಚ್ಚು. ಆದರೆ, ಒಂದೇ ತರನಾದ ಬೆಳೆಯಿಂದ ಬೆಂಬಲ ಬೆಲೆ ದೊರೆಯುವುದಿಲ್ಲ.

ಆದ್ದರಿಂದ ತೋಟಗಾರಿಕೆ ಬೆಳೆಯಲ್ಲಿ ಒಂದಾದ ಬದನೆಕಾಯಿ ಬೆಳೆಯತ್ತ ಮುಖ ಮಾಡಿದ ರೈತನಿಗೆ ನಷ್ಟದ ಅನುಭವಾಗಿದೆ. ಭೂಮಿ ಹದ ಮಾಡಿ, ಸಸಿ ನಾಟಿಯಿಂದ ಹಿಡಿದು, ರಸಗೊಬ್ಬರ ಬಳಕೆ, ಕಸ ನಿರ್ವಹಣೆ, ಕೂಲಿ ಕಾರ್ಮಿಕ ವೆಚ್ಚ ಸೇರಿದಂತೆ ಒಟ್ಟಾರೆಯಾಗಿ ಒಂದು ವರೆ ಎಕರೆಗೆ ಸುಮಾರು 1 ಲಕ್ಷ 80 ಸಾವಿರ ಖರ್ಚು ಮಾಡಲಾಗಿದೆ. ಆದರೆ, ಇಲ್ಲಿತನಕ



ಬರೀ 80 ಸಾವಿರ ಮೌಲ್ಯದ ಫಸಲು ಬಂದಿದ್ದು, ಭೂಮಿಗೆ ಹಾಕಿದ ಇನ್ನೂ 1 ಲಕ್ಷ ನಷ್ಟವಾಗಿದೆ.

ಮತ್ತು ರೈತನ ದಿನನಿತ್ಯದ ದುಡಿಮೆಗೆ ಲಾಭ ಇಲ್ಲದಂತಾಗಿದೆ. ಇದರಿಂದ ರೈತನ ಬದುಕು ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಇಲ್ಲಿ ಹೆಚ್ಚಾಗಿ ದಲ್ಲಾಳಿ ಮತ್ತು ವ್ಯಾಪಾರಸ್ಥ–ರಿಗೆ ಅಧಿಕ ಲಾಭವಾಗಿದ್ದು ಬಿಟ್ಟರೆ, ರೈತರಿಗೆ ನಷ್ಟವಾಗಿದೆ. ಸರ್ಕಾರ, ಅಧಿಕಾರಿಗಳು ಬೆಳೆ ನಷ್ಟದಲ್ಲಿ ಸಿಲುಕಿರುವ ರೈತರ ಕಡೆಗೆ ಮುಖ ಮಾಡಲುವ ಜೊತೆಗೆ ರೈತರಿಗೆ ನಷ್ಟ ಪರಿಹಾರ ನೀಡಬೇಕೆಂಬುದು ರೈತರ ಹಕ್ಕೋತ್ತಾಯವಾಗಿದೆ. ರಸಗೊಬ್ಬರ ಏರಿಕೆ ಬರೆ : ಈಗಾಗಲೇ ರಸಗೊಬ್ಬರ, ಡಿಸೆಲ್, ಪರಿಕರ, ಕೂಲಿ ಕಾರ್ಮಿಕರ ದರ ಗಣನೀಯವಾಗಿ ಏರಿಕೆ ಕಂಡಿದ್ದು, ಈ ದರ ಏರಿಕೆ ನಡುವೆ ರೈತರಿಗೆ ನಷ್ಟ ಭಾರವಾಗಿದೆ. ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿ, ಗುತ್ತಿಗೆ ಆಧಾರದಲ್ಲಿ ಬೆಳೆದ ರೈತನ ಪಾಡು ಅದೋ ಗತಿ ಎನ್ನುವಂತಾಗಿದೆ.

ಹುಳ ಬಾಧೆ : ಮೂರನೇ ಹಂತದಲ್ಲಿ ಉತ್ತಮ ಇಳುವರಿ ಕಂಡು ಬಂದರೂ, ನಂತರ

**1 ವರೆ ಎಕರೆ ಜಮೀನಿನಲ್ಲಿ ಗುತ್ತಿಗೆ ಆಧಾರದ ಮೇಲೆ ಬಧನೆಕಾಯಿ ಬೆಳೆ ಬೆಳೆದಿದ್ದು, ಸುಮಾರು 1 ಲಕ್ಷ 80 ಸಾವಿರ ಖರ್ಚು ಮಾಡಿ ಬೆಳೆದ ಬೆಳೆಗೆ ಬೆಂಬಲ ಇಲ್ಲದಂತಾಗಿದೆ. ಬರೀ 80 ಸಾವಿರ ಫಸಲು ಬಂದಿದ್ದು, ಒಂದು ಲಕ್ಷ ರೂ. ಗಳ ನಷ್ಟವಾಗಿದೆ. ಬೆಳೆ ಕೀಳಿ, ಬಾಡಿಗೆ ತರದ ವಾಹನದಲ್ಲಿ ಗಂಗಾವತಿ ಸಂತೆ ಮಾರುಕಟ್ಟೆ ತೆಗೆದುಕೊಂಡು ಹೋಗಿ, ದಲ್ಲಾಳಿಗಳಿಗೆ ಅಧಿಕ ಲಾಭ, ರೈತರಿಗೆ ನಷ್ಟದ ಬರೆಯಾಗಿದೆ. ಇದೇ ತರವಾದರೆ ಮುಂದಿನ ದಿನದಲ್ಲಿ ರೈತತನವನ್ನೇ ಬಿಡುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಸರ್ಕಾರ, ತೋಟಗಾರಿಕೆ ಅಧಿಕಾರಿಗಳು ಗಮನ ಹರಿಸಿ, ಬೆಳೆ ನಷ್ಟ ಪರಿಹಾರ ನೀಡಿದರೆ, ರೈತರು ಉಳಿಯಲು ಸಾಧ್ಯ.**



ಕೀಳುವೆ ಸಂದರ್ಭದಲ್ಲಿ ಅತಿ ಹೆಚ್ಚು ಹುಳು ಬಾಧೆಯಿಂದ ಬೆಳೆ ಕೂಡಿದ್ದು, ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿಸಿದೆ. ಮತ್ತು ಉತ್ತರ ದರ ಇಲ್ಲದ ಪರಿಣಾಮ ಬದನೆಕಾಯಿ ಫಸಲನ್ನು ರಸ್ತೆಗೆ ಎಸೆಯಲಾಯಿತು. ಒಟ್ನಲ್ಲಿ ರೈತರು ಬದುಕು ಆರ್ಥಿಕ ಸಂಕಷ್ಟದಲ್ಲಿಯೇ ಸಾಗಿವಂತಾಗಿದೆ.

### ವಚನ ದರ್ಶನ

ಶಿವ ಗುರುವೆಂದು ಬಲ್ಲಾತನೆ ಗುರು. ಶಿವಲಿಂಗವೆಂದು ಬಲ್ಲಾತನೆ ಗುರು. ಶಿವ ಜಂಗಮವೆಂದು ಬಲ್ಲಾತನೆ ಗುರು. ಶಿವ ಪ್ರಸಾದವೆಂದು ಬಲ್ಲಾತನೆ ಗುರು. ಶಿವ ಆಚಾರವೆಂದು ಬಲ್ಲಾತನೆ ಗುರು ಇಂತೀ ಪಂಚವಿಧವೆ ಪಂಚಬ್ರಹ್ಮವೆಂದರಿದ ಮಹಾ ಮಹಿಮ ಸಂಗನಬಸವಣ್ಣನು ಎನಗೆಯೂ ಗುರು ನಿನಗೆಯೂ ಗುರು ಜಗವೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರಾ

12ನೇ ಶತಮಾನದ ಶೂನ್ಯಪೀಠದ ಪ್ರಥಮ ಪೀಠಾಧೀಶರಾದ ಅಲ್ಲಮಪ್ರಭುಗಳು ರಚಿಸಿರುವ ಪ್ರಸಿದ್ಧ ವಚನವಾಗಿದೆ. ಈ ವಚನದಲ್ಲಿ ಅವರು ಜಗಜ್ಯೋತಿ ಬಸವಣ್ಣನವರ ಮಹಿಮೆಯನ್ನು ಕೊಂಡಾಡಿದ್ದಾರೆ.

ಪಂಚವಿಧ ಜ್ಞಾನ. ಶಿವನೇ ಗುರು, ಶಿವನೇ ಲಿಂಗ, ಜಂಗಮ, ಶಿವನೇ ಪ್ರಸಾದ ಮತ್ತು ಶಿವನೇ ಆಚಾರ ಎಂಬುದನ್ನು ಸಾಕ್ಷಾತ್ಕರಿಸಿಕೊಂಡವನೇ ನಿಜವಾದ ಗುರು.

ಪರಶಿವನೇ ಎಲ್ಲವೂ: ಶಿವನೇ ನಿಜವಾದ ಗುರು, ಶಿವನೇ ಲಿಂಗ, ಶಿವನೇ ಚಲಿಸುವ ದೈವವಾದ ಜಂಗಮ, ಶಿವನೇ ಪ್ರಸಾದ ಮತ್ತು ಶಿವನೇ ಸದಾಚಾರ ಎಂದು ಯಾರು ಸಂಪೂರ್ಣವಾಗಿ ಅರಿತುಕೊಳ್ಳುತ್ತಾರೋ ಅವರೇ ಶ್ರೇಷ್ಠ ಗುರುಗಳು.

ಜಗದ ಗುರು. ಅಂತಹ ದಿವ್ಯ ಜ್ಞಾನವನ್ನು ಹೊಂದಿರುವ ಬಸವಣ್ಣನವರು ಕೇವಲ ಸಮಾಜಕ್ಕಷ್ಟೇ ಅಲ್ಲ, ನನಗೆ ಅಲ್ಲಮಪ್ರಭುಗಳಿಗೆ ನಿನಗೆ ಹಾಗೂ ಇಡೀ ಜಗತ್ತಿಗೆ ಜಗದ್ಗುರುಗಳಾಗಿದ್ದಾರೆ ಎಂದು ಶರಣ–ರು ವಿವರಿಸಿದ್ದಾರೆ.

ಜಗದ್ಗುರು. ಅಂತಹ ವಿಶ್ವಗುರು ಬಸವಣ್ಣನು ಕೇವಲ ಸಾಮಾನ್ಯರಿಗಷ್ಟೇ ಅಲ್ಲದೆ ಅಲ್ಲಮಪ್ರಭುಗಳಿಗೂ, ಅವರೆದುರಿಗಿರುವವರಿಗೂ ಹಾಗೂ ಇಡೀ ಜಗತ್ತಿಗೇ ಗುರು ಎಂದು ತಮ್ಮ ಆರಾಧ್ಯ ದೈವ 'ಗುಹೇಶ್ವರ'ನ ಸಾಕ್ಷಿಯಾಗಿ ಪ್ರಭುದೇವರು ಸಾರಿದ್ದಾರೆ. ಅಲ್ಲಮಪ್ರಭುವಿನ ಈ ವಚನ ನಮಗೂ ನಿಮಗೂ ದಾರಿದೀಪವಾಗಲಿ ಸರ್ವರಿಗೂ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

# ಕಂಪ್ಲಿಯಲ್ಲಿ ಪ್ರಜಾ ಸೇವಾ ಆಂದೋಲನ: ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಸ್ಪಂದನೆ
# ಕಂಪ್ಲಿ ಕ್ಷೇತ್ರದ ಅಭಿವೃದ್ಧಿಗೆ ಜನಧ್ವನಿಯೇ ಶಕ್ತಿ: ಶಾಸಕ ಜೆ. ಎನ್. ಗಣೇಶ

❏ ನೈಜ್ಯ ದೆಸೆ ನ್ಯೂಸ್

"ಸಮಸ್ಯೆನಿಮ್ಮದು? ಪರಿಹಾರದ ಹೊಣೆ ನಮ್ಮದು!" ಆಶಯದೊಂದಿಗೆ ಕಂಪ್ಲಿ ವಿಧಾನಸಭಾ ಕ್ಷೇತ್ರದ ಪ್ರಜಾ ಸೇವಾ ಆಂದೋಲನ ಆಯೋಜಿಸಲಾಗಿತ್ತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ, ಶಾಸಕ ಜೆ. ಎನ್. ಗಣೇಶ ಕಾಂಗ್ರೆಸ್ ಸರ್ಕಾರ ಜನರಿಗಾಗಿ ಇದ್ದು, ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ಅವರ ಕನಸಿನ ಯೋಜನೆಯಾಗಿರುವ ಪ್ರಜಾ ಸೇವಾ ಆಂದೋಲನದ ಮೂಲಕ ಜನರ ಸಮಸ್ಯೆಗಳಿಗೆ




ಸೂಕ್ತ ಪರಿಹಾರ ಕಲ್ಪಿಸುವುದು ಆದ್ಯತೆ ಎಂದರು. ಜನರ ಅಹವಾಲುಗಳನ್ನು ನೇರವಾಗಿ ಆಲಿಸಿ, ಸಂಬಂಧಿಸಿದ ಇಲಾಖೆಗಳ ಅಧಿಕಾ–ರಿಗಳೊಂದಿಗೆ ಸಮನ್ವಯ ಸಾಧಿಸಿ ಪರಿಹಾರ ಕಂಡುಕೊಳ್ಳುವ ಉದ್ದೇಶವಿದೆ ಎಂದು ತಿಳಿಸಿದರು. "ಸಾರ್ಥಕ ಸೇವೆ?ನಿರಂತರ ಅಭಿವೃದ್ಧಿ ನಿರಂತರ ಜನಸಂಪರ್ಕ" ಧ್ಯೇಯದೊಂದಿಗೆ ಸಮೃದ್ಧ ಸುಭದ್ರ ಕಂಪ್ಲಿ ಕ್ಷೇತ್ರದ ಪ್ರಗತಿಗೆ ಸಂಕಲ್ಪ ಹೊಂದಿದ್ದು, ಪ್ರತಿ ಸಮಸ್ಯೆಗೂ ಸ್ಪಂದಿಸುವುದಾಗಿ ಭರವಸೆ ನೀಡಿದರು. "ಒಂದು ಅರ್ಜಿ ವರ್ಷಗಳ ಸಮಸ್ಯೆಗೆ ಪರಿಹಾರದ ಹೆಜ್ಜೆ" ಎಂಬ ಆಶಯದೊಂದಿಗೆ ಸ್ಥಳದಲ್ಲೇ ಅಹವಾಲು ಸ್ವೀಕಾರ ನಡೆಯಿತು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಜೂಗಲ್ ಮಂಜುನಾಯಕ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಶ್ರೀಕುಮಾರ್, ಕಂಪ್ಲಿ ಪುರಸಭೆ ಮುಖ್ಯಾಧಿಕಾರಿ ಬಿ. ಮಲ್ಲಿಕಾರ್ಜುನ, ಇಲಾಖೆ ಅಧಿಕಾರಿಗಳು, ಇಸಿಓ ಟಿ. ಎಂ. ಬಸವರಾಜ, ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಕೆ. ಶ್ರೀನಿವಾಸ, ಎಪಿಎಂಸಿ ಅಧ್ಯಕ್ಷ ಎನ್. ಹಬೀಬಿ ರೆಹಮಾನ್, ಅಧಿಕಾ–ರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

## ಬಿಜೆಪಿ ಕುತಂತ್ರವೇ ಸತೀಶ್ ಜಾರಕಿಹೊಳಿ ಮನೆ ಮೇಲಿನ ಇಡಿ ದಾಳಿ : ಬಿ.ನಬೀಸಾಬ್ ಆರೋಪ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸತೀಶ ಜಾರಕಿ ಹೊಳಿ ಅವರ ವರ್ಚಸ್ಸು ಹೆಚ್ಚಿದ್ದು, ಮತ್ತು ಮುಂದಿನ ಮುಖ್ಯಮಂತ್ರಿ ಆಕಾಂಕ್ಷಿಯಾಗಿರುವ ಹಿನ್ನಲೆ ಬಿಜೆಪಿ ಕುತಂತ್ರದ ಇಡಿ ದಾಳಿಯಾಗಿದ್ದು, ಇದನ್ನು ತೀವ್ರವಾಗಿ ಮಾನವ ಬಂದುತ್ವ ವೇದಿಕೆ ಖಂಡಿಸುವ ಜೊತೆಗೆ ಮುಂಬರುವ ದಿನದಲ್ಲಿ ಕೇಂದ್ರದ ಬಿಜೆಪಿ ಸರ್ಕಾರಕ್ಕೆ ತಕ್ಕಪಾಠ ಕಲಿಸುತ್ತೇವೆ ಎಂದು ಮಾನವ ಬಂದುತ್ವ ವೇದಿಕೆಯ ಕಂಪ್ಲಿ ತಾಲೂಕು ಸಂಚಾಲಕ ಬಿ.ನಬಿಸಾಬ್ ಹೇಳಿದರು.

ಪಟ್ಟಣದ ಅತಿಥಿ ಗೃಹದಲ್ಲಿ ಶನಿವಾರ ನಡೆದ ಸಂಘಟನಾ ಸಭೆಯಲ್ಲಿ ಮಾನವ ಬಂದುತ್ವ ವೇದಿಕೆ ಸಂಸ್ಥಾಪಕ ಮತ್ತು ಸಚಿವ ಸತೀಶ ಜಾರಕಿಹೊಳಿ ಅವರ ಮನೆ ಮೇಲಿನ ದಾಳಿ ಖಂಡಿಸಿ ಮಾತನಾಡಿ, ಸತೀಶ್ ಜಾರಕಿಹೊಳಿ ಅವರು ರಾಜ್ಯದ ಮುಂದಿನ ಮುಖ್ಯಮಂತ್ರಿಯಾಗುತ್ತಾರೆ ಎಂಬ ಭೀತಿಯಿಂದ ಹಾಗೂ ಅವರ ರಾಜ–ಕೀಯ ಉದ್ದೇಶಪೂರ್ವಕವಾಗಿ ಇಡಿ ಸಂಸ್ಥೆಯನ್ನು ದುರ್ಬಳಕೆ ಮಾಡಿಕೊಂಡು ದಾಳಿ ಮಾಡಿಸಿದೆ. ಇದು ರಾಜಕೀಯ ಪ್ರೇ–ರಿತ ದಾಳಿಯಾಗಿದೆ. ರಾಜ್ಯದ ಬಿಜೆಪಿವರ ಮಾತನ್ನು ಕೇಳಿಕೊಂಡು ಕೇಂದ್ರದ ಸರ್ಕಾರವು ವಿರೋಧ ಪಕ್ಷದ ನಾಯಕರನ್ನು, ಮುಖಂಡರನ್ನು ಗುರಿಯಾಗಿಸಿಕೊಂಡು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ.

ಸತೀಶ್ ಜಾರಕಿಹೊಳಿ ಅವರ ಜನಪ್ರಿಯತೆ ಸಹಿಸದೇ ಈ ರೀತಿ ದಾಳಿ ನಡೆಸಲಾಗಿದೆ. ಆದರೆ, ಜಾರಕಿಹೊಳಿ ಅವರು ಈ ದಾಳಿಗೆ ಕಾನೂನಾತ್ಮಕವಾಗಿಯೇ ಸೂಕ್ತ



ಉತ್ತರ ನೀಡಲಿದ್ದಾರೆ. ಮತ್ತು ಅವರ ಜೊತೆಗೆ ಇಡೀ ರಾಜ್ಯದಲ್ಲಿ ಅಭಿಮಾನಿಗಳು, ಕಾರ್ಯಕರ್ತರಿದ್ದೇವೆ. ಇದೇ ತರನಾಗಿ ದಾಳಿ ಮುಂದುವರೆಸಿದರೆ, ರಸ್ತೆಗೆ ಇಳಿದು ಹೋರಾಟದ ಮೂಲಕ ಬಿಜೆಪಿ ಚಳಿ ಬಿಡಿಸಲಾಗುವುದು ಎಂದು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅಂಜುಮನ್ ಕಮಿಟಿ ಅಧ್ಯಕ್ಷ ಅಬ್ದುಲ್ ಕರೀಂ ಲಡ್ಡು, ಮುಖಂಡರಾದ ಸಣಾಪುರ ಮರಿಸ್ವಾಮಿ, ವಸಂತರಾಜ ಕಹಳೆ, ವರದಿ ಜಾಫರ್, ರವಿ ಮಣ್ಣೂರು, ವಾಸು, ರಾಜಾಭಕ್ಷಿ, ಶಿವರಾಮ ಇದ್ದರು.

## 3 ಮೆಟ್ರೋ ರೈಲು ನಿಲ್ದಾಣಗಳ ಹೆಸರು ಬದಲಿಸಲು ರಾಮಲಿಂಗಾರೆಡ್ಡಿ ಪತ್ರ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೂರು ಮೆಟ್ರೋ ರೈಲು ನಿಲ್ದಾಣಗಳ ಹೆಸರನ್ನು ಬದಲಾಯಿಸುವಂತೆ ಅರಣ್ಯ ಸಚಿವ ರಾಮಲಿಂಗಾರೆಡ್ಡಿ ನಮ ಮೆಟ್ರೋ ರೈಲು ನಿಗಮಕ್ಕೆ ಪತ್ರ ಬರೆದಿದ್ದಾರೆ. ಜೆ.ಪಿ.ನಗರ 4ನೇ ಹಂ ಮೆಟ್ರೋ ನಿಲ್ದಾಣವನ್ನುಎಸ್.ಎಸ್.ಪಾಳ್ಯ ಮೆಟ್ರೋ ನಿಲ್ದಾಣವೆಂದು, ತಾವರೆಕೆರೆ ಮೆಟ್ರೋ ನಿಲ್ದಾಣವನ್ನು ಎಸ್.ಜಿ.ಪಾಳ್ಯ ಮೆಟ್ರೋ ನಿಲ್ದಾಣವೆಂದು ಹಾಗೂ ಡೈರಿ ವೃತ್ತ ಮೆಟ್ರೋ ನಿಲ್ದಾಣವನ್ನು ಲಕ್ಕಸಂದ್ರ ಮೆಟ್ರೋ ನಿಲ್ದಾಣವೆಂದು



ಮರು ನಾಮಕರಣ ಮಾಡುವಂತೆ ಮೆಟ್ರೋ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಬರೆದಿರುವ ಪತ್ರದಲ್ಲಿ ಸಚಿವರು ತಿಳಿಸಿದ್ದಾರೆ.

ನನ್ನ ಮತ ಕ್ಷೇತ್ರವಾದ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಹಾಗೂ ನಿರ್ಮಾಣ ಹಂತದಲ್ಲಿರುವ ಮೆಟ್ರೋ ನಿಲ್ದಾಣಗಳ ಹೆಸರನ್ನು ಆಯಾ ನಿಲ್ದಾಣಗಳು ಇರುವ ಸ್ಥಳೀಯ ಪ್ರವೇಶದ ಹೆಸರು, ಐತಿಹಾಸಿಕ ಹಾಗೂ ಭೌಗೋಳಿಕ ಮಹತ್ವ ಮತ್ತು ಸಾರ್ವಜನಿಕರ ಸಾಮಾನ್ಯ ಅಭಿಪ್ರಾಯವನ್ನು ಪರಿಗಣಿಸಿ ಸೂಕ್ತವಾಗಿ ಮರುನಾಮಕರ ಮಾಡುವ ಅಗತ್ಯವಿದೆ ಎಂದು ಅವರು ಹೇಳಿದ್ದಾರೆ. ಪ್ರಸ್ತುತ ಕೆಲವು ಮೆಟ್ರೋ ನಿಲ್ದಾಣಗಳ ಹೆಸರುಗಳು ನಿಲ್ದಾಣ ಇರುವ ನಿಖರ ಸ್ಥಳ ಅಥವಾ ಆ ಪ್ರದೇಶದ ಜನರಿಗೆ ಹೆಚ್ಚು ಪರಿಚಿತವಾಗಿರುವ ಸ್ಥಳೀಯ ಹೆಸರನ್ನು ಪ್ರತಿಬಿಂಬಿಸುವುದಿಲ್ಲ.

## ಮೈಸೂರಿನ ಪೌರಕಾರ್ಮಿಕ ಬೇಡಿಕೆಗಳನ್ನು ಸ್ವೀಕರಿಸಿ, ಸಮಸ್ಯೆಗಳನ್ನು ಆಲಿಸಿದೆ. ವಿಧಾನ ಪರಿಷತ್ ಸದಸ್ಯ ಕೆ ಶಿವಕುಮಾರ್

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಮೈಸೂರಿನ ಪೌರಕಾರ್ಮಿಕ ಸಮುದಾಯ ಭವನದಲ್ಲಿ ಪೌರಕಾರ್ಮಿಕರ ಬೇಡಿಕೆಗಳನ್ನು ಸ್ವೀಕರಿಸಿ, ಸಮಸ್ಯೆಗಳನ್ನು ಆಲಿಸಿ ಆಲಿಸಿದ ಹಿರಿಯ ಪತ್ರಕರ್ತರು.

ವಿಧಾನ ಪರಿಷತ್ ಸದಸ್ಯ ಕೆ ಶಿವಕುಮಾರ್ ರವರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಾಗಿ ಭರವಸೆ ನೀಡಿದರು ಪೌರಕಾರ್ಮಿಕ ಬಂಧುಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಗೂ ಜ್ಞಾನಾರ್ಜನೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾಲೋನಿಯಲ್ಲಿ ಎರಡು ಗ್ರಂಥಾಲಯವನ್ನು ನನ್ನ ಅನುದಾನದಲ್ಲಿ ನಿರ್ಮಿಸಿಕೊಡಲಾಗುವುದು. ಶ್ರಮಿಕ ಜೀವಿಗಳಾದ ಪೌರಕಾರ್ಮಿಕರ



ಸಮಸ್ಯೆಗಳು ನನಗೆ ಅರಿವಿದೆ. ನಿಮ್ಮೆಲ್ಲರ ಬೇಡಿಕೆಗಳನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಅವರು ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ ಅವರಿಗೆ ಮನವರಿಕೆ ಮಾಡುತ್ತೇನೆ. ನಗರದಲ್ಲಿ ಎರಡು ಸುಸಜ್ಜಿತ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲು ಸರ್ಕಾರದ ಗಮನಕ್ಕೆ ತರಲಾಗುವುದು.

ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ತೆರಳುವ ವಿದ್ಯಾರ್ಥಿಗಳು ಸರ್ಕಾರದ ಸೌಲಭ್ಯ ಬಳಿಸಿಕೊಳ್ಳಬೇಕು. ಎಲ್ಲಾ ಬಗೆಯ ಕಲ್ಯಾಣ ಕಾರ್ಯಕ್ರಮಗಳ ಉಪಯೋಗ ಪಡೆದು ಎರಡನೇ ತಲೆಮಾರಿಗೆ ಉನ್ನತ ಉದ್ಯೋಗದಲ್ಲಿರಬೇಕು ಎಂದು ಕಿವಿಮಾತು ಹೇಳಿದರು ಹಬ್ಬಹರಿದಿನಗಳಲ್ಲಿ ಸಾಲ ಮಾಡಿಕೊಂಡು ದುಬಾರಿ ಖರ್ಚು ಮಾಡಬೇಡಿ. ಕೆಲವರು ದುಶ್ಚಟಗಳಿಗೆ ಒಳಗಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದು, ದುರಭ್ಯಾಸಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎಂದು ಸಲಹೆ ನೀಡಿದರು ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಶ್ರೀನಿವಾಸ, ಮುಖಂಡರಾದ ಮಾರ ಸೇ–ರಿದಂತೆ ಮುಂತಾದವರು ಹಾಜರಿದ್ದರು.

## ವಾಟ್ಸ್ಯಾಪ್ ಮೂಲಕ KSRTC ಬಸ್ ಟಿಕೆಟ್ ಬುಕ್ಕಿಂಗ್‌ಗೆ ಅವಕಾಶ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಪ್ರಯಾಣಿಕರಿಗೆ ಮತ್ತಷ್ಟು ಸುಲಭ, ಸರಳ ಹಾಗೂ ಅನುಕೂಲಕರ ಸಾರಿಗೆ ಸೇವೆ ಒದಗಿಸುವ ನಿಟ್ಟಿನಲ್ಲಿ ಡಿಜಿಟಲ್ ಸೇವೆಗಳನ್ನು ವಿಸ್ತರಿಸುತ್ತಿದೆ.

ಇದರ ಭಾಗವಾಗಿ ಒಂದು ಕರ್ನಾಟಕ ಮೊಬಿಲಿಟಿ ಆ್ಯಪ್ ಮೂಲಕ ರಾಜ್ಯದ ನಾಲ್ಕು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಸಾರಿಗೆ ಸೇವೆಗಳನ್ನು ಒಂದೇ ಡಿಜಿಟಲ್ ವೇದಿಕೆಯಲ್ಲಿ ಒಗ್ಗೂಡಿಸುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರು ಸರ್ಕಾರದ ನೂರು ದಿನಗಳ ಕಾರ್ಯಕ್ರಮದಲ್ಲಿ ಈ ಆ್ಯಪ್ ಹಾಗೂ ವಾಟ್ಸ್ಯಾಪ್ ಟಿಕೆಟಿಂಗ್ ಸೌಲಭ್ಯವನ್ನು ಲೋಕಾರ್ಪಣೆಗೊಳಿಸಿದ್ದಾರೆ.



**ಮೊಬೈಲ್ ಆ್ಯಪ್ ಬಗ್ಗೆ :** ಸುರಕ್ಷಿತ ಲಾಗಿನ್ ವ್ಯವಸ್ಥೆಯ ಮೂಲಕ ಪ್ರಯಾಣಿಕರ ಗುರುತಿನ ದೃಢೀಕರಣ, ಹಿಂದಿನ ಬುಕ್ಕಿಂಗ್‌ಗಳ ವಿವರ ವೀಕ್ಷಣೆ ಹಾಗೂ ವಹಿವಾಟುಗಳ ನಿರ್ವಹಣೆಗೆ ಅವಕಾಶ ಕಲ್ಪಿಸಲಾಗಿದೆ. ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಸಂಬಂಧಿಸಿದ ಪ್ರಯಾಣಿಕರ ದೂರುಗಳನ್ನು ಒಂದೇ ವೇದಿಕೆಯಲ್ಲಿ ದಾಖಲಿಸಿ, ದೂರುಗಳ ಸ್ಥಿತಿಯನ್ನು ಪರಿಶೀಲಿಸುವುದು, ಅಗತ್ಯವಿದ್ದಲ್ಲಿ ಮೇಲ್ದರ್ಜೆಗೆ ಕಳುಹಿಸುವುದು ಹಾಗೂ ಪರಿಹಾರದ ಪ್ರಗತಿಯನ್ನು ಟ್ರ್ಯಾಕ್ ಮಾಡುವ ಸೌಲಭ್ಯ ದೊರೆಯಲಿದೆ.

**ವಾಟ್ಸ್ಯಾಪ್ ಮೂಲಕ ಟಿಕೆಟ್ ಬುಕ್ಕಿಂಗ್ :** ಪ್ರಯಾಣಿಕರ ಅನುಕೂಲಕ್ಕಾಗಿ ವಾಟ್ಸ್ಯಾಪ್ ಮೂಲಕ ಕೆಎಸ್‌ಆರ್‌ಟಿಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ, ಕೆಕೆಆರ್‌ಟಿಸಿ ಬಸ್‌ಗಳ ಟಿಕೆಟ್ ಬುಕ್ಕಿಂಗ್ ಸೌಲಭ್ಯವನ್ನು ಸಹ ಒದಗಿಸಲಾಗಿದೆ.ಪ್ರಯಾಣಿಕರು +91 6364940880 ವಾಟ್ಸ್ಯಾಪ್ ಸಂಖ್ಯೆಗೆ ಸಂದೇಶವನ್ನು ಕಳುಹಿಸುವ ಮೂಲಕ ಬುಕ್ಕಿಂಗ್ ಪ್ರಕ್ರಿಯೆಯನ್ನು ಆರಂಭಿಸಬಹುದು. ನಂತರ ವಾಟ್ಸಾಪ್‌ನಲ್ಲಿಯೇ ಲಭ್ಯವಾಗುವ ಸಂವಾದಾತಕ ವ್ಯವಸ್ಥೆಯು ಟಿಕೆಟ್ ಕಾಯ್ದಿರಿಸುವಿಕೆಯ ಸಂಪೂರ್ಣ ಪ್ರಕ್ರಿಯೆಗೆ ಮಾರ್ಗದರ್ಶನ ನೀಡಲಿದೆ.

ಪಾವತಿಗಾಗಿ ಯುಪಿಐ, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಹಾಗೂ ವಾಲೆಟ್‌ಗಳು ಸೇರಿದಂತೆ ವಿವಿಧ ಪಾವತಿ ವಿಧಾನಗಳನ್ನು ಬಳಸಬಹುದಾಗಿದೆ.ಪಾವತಿ ಯಶಸ್ವಿಯಾದ ನಂತರ ಬುಕ್ಕಿಂಗ್ ದೃಢೀಕರಣ ಹಾಗೂ ಇ–ಟಿಕೆಟ್ ಅನ್ನು ವಾಟ್ಸ್ಯಾಪ್ ಮತ್ತು ಇ–ಮೇಲ್ ಮೂಲಕ ಪ್ರಯಾಣಿಕರಿಗೆ ಹಂಚಿಕೊಳ್ಳಲಾಗುತ್ತದೆ. ವಾಟ್ಸ್ಯಾಪ್ ಮೂಲಕ ಟಿಕೆಟ್ ರದ್ದುಪಡಿಸಲು ಅವಕಾಶವಿದೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ವಿಶ್ವ ಆತ್ಮಹತ್ಯೆ ತಡೆ ದಿನ– ಯಾವುದೋ ಘಟನೆಯಿಂದ ಸ್ವಯಂ ಜೀವಹಾನಿ ಮಾಡಿಕೊಳ್ಳದೆ, ಜೀವನದ ಸುಂದರ ಕ್ಷಣಗಳನ್ನು ಅನುಭವಿಸಿ: ಡಾ ಶರಣಬಸಪ್ಪ ಗಣಜಲಖೇಡ

❏ ನೈಜ್ಯ ದೆಸೆ ನ್ಯೂಸ್

ಮನುಷ್ಯನಿಗೆ ಜೀವನದಲ್ಲಿ ಎದುರಾಗುವ ಸಂದೀಗ್ದ ಪರಸ್ಥಿತಿಗಳನ್ನು ಎದುರಿಸಲು ಸಾವಧಾನ, ಶಾಂತಚಿತ್ತ, ಮನಸ್ಸು ಅತ್ಯಗತ್ಯವಾಗಿದ್ದು ಅಂತ ಸಂಧರ್ಭದಲ್ಲಿ ಹಿತೈಷಿಗಳ, ಬಂಧುಗಳ, ಪಾಲಕರು ನೀಡುವ ಆತ್ಮಸ್ಥೈರ ಅತಿಮುಖ್ಯವಾಗಿದೆ ಇದಕ್ಕಾಗಿ ತಜ್ಞರ ಸಲಹೆಯನ್ನು ಉಚಿತ ಟೆಲಿಮಾನಸ್ ಸಹಾಯವಾಣಿ 14416 ಗೆ ಕರೆ ಮಾಡಲು ಹೆಚ್ಚಿನ ಜಾಗೃತಿಯನ್ನು ನೀಡಿ ಎಂದು ಕಲಬುರ್ಗಿ ವಿಭಾಗೀಯ ಉಪನಿರ್ದೇಶಕರು, ಡಾ ಶರಣಬಸಪ್ಪ ಗಣಜಲಖೇಡ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಾನಸಿಕ ಆರೋಗ್ಯ ವಿಭಾಗ, ರಾಯಚೂರು ರವರ ಆಶ್ರಯದಲ್ಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾ–ರಿಗಳ ಕಾರ್ಯಾಲಯದ ತುಂಗಾ ಭವನದಲ್ಲಿ ಜರುಗಿದ ವಿಶ್ವ ಅತ್ಮಹತ್ಯೆ ತಡೆ ದಿನಾಚರಣೆಯ ಅಂಗವಾಗಿ ಜರುಗಿದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಮನೆಯಲ್ಲಿನ ಚಿಕ್ಕ ಘಟನೆಗಳು, ಕೆಲಸದ ಒತ್ತಡ, ಪರೀಕ್ಷಾ ವಿಫಲತೆ, ಉದ್ಯೋಗದ ವೈಪಲ್ಯ, ಸಂಸಾರ ನಿರ್ವಹಣೆಯಲ್ಲಿ ಅಡಚಣೆ,




ಸಾಲಭಾದೆ, ಮುಂತಾದವುಗಳು ಆತ್ಮಹತ್ಯೆಯಂತಹ ಆತುರದ ತಪ್ಪು ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯನ್ನು ಸಕಾಲದಲ್ಲಿ ಗುರ್ತಿಸಿ ಧೈರ್ಯ ತುಂಬವ ಕಾರ್ಯ ಮಾಡಬೇಕು ಎಂದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ಮಾತನಾಡಿ, ಮಾನಸಿಕವಾಗಿ ಸದೃಡವಾದರೆ ಯಾವುದೇ ಸಂದರ್ಭವನ್ನು ಎದುರಿಸುವ ಛಲ ಬರುತ್ತದೆ. ಇದಕ್ಕೆ ಕುಟುಂಬದ ಸದಸ್ಯರ ಬೆಂಬಲ ಎಷ್ಟು ಮುಖ್ಯವೋ ವೈದ್ಯರ ಬಳಿ ಆಪ್ತಸಮಾಲೊಚನೆ, ಅವಶ್ಯಕತೆಯಿದ್ದಲ್ಲಿ ಚಿಕಿತ್ಸೆಯು ಮುಖ್ಯವಾದುದು.

ಮನೋಚೈತನ್ಯ ಕಾರ್ಯಕ್ರಮ: ಈ ದಿಶೆಯಲ್ಲಿ ಜಿಲ್ಲೆಯಲ್ಲಿ ಜಿಲ್ಲಾ ಮಾನಸಿಕ ಕಾರ್ಯಕ್ರಮದಡಿ ಮನೊರೋಗ ತಜ್ಞರ ನೇತೃತ್ವದಲ್ಲಿ ವೈದ್ಯಕೀಯ ತಂಡವು ಜಿಲ್ಲೆಯ, ದೇವದುರ್ಗ ಮೊದಲ ಮಂಗಳವಾರ, ಲಿಂಗಸುಗೂರ ಎರಡನೇ ಮಂಗಳವಾರ, ಸಿಂಧನೂರು ಮೂರನೆ ಮಂಗಳವಾರ, ಮಾನವಿ ನಾಲ್ಕನೇ ಮಂಗಳವಾರ ದಂದು ಆಯಾ ತಾಲೂಕಾ ಸಾರ್ವಜನಿಕ ಆಸ್ಪತ್ರೆಗೆ ಹಾಗೂ ಎರಡನೇ ಶುಕ್ರವಾರ ರಾಯಚೂರು ನಗರದ ಜಹೀರಾಬಾದ್, ನಾಲ್ಕನೇ ಶುಕ್ರವಾರ ಗ್ರಾಮೀಣ ಭಾಗದ ಪ್ರಾಥ–'ಮಿಕ ಆರೋಗ್ಯ ಕೇಂದ್ರಗಳಿಗೆ ಬೇಟಿ ನೀಡುವರು. ಇದರ ಸದುಪಯೋಗ ಪಡೆಯಲು ವ್ಯಾಪಕ ಮಾಹಿತಿ ನೀಡುವಂತೆ ತಿಳಿಸಿದರು.

ಕಭಿ ಕಾರ್ಯಕ್ರಮ ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮದಡಿ ರಾಯಚೂ–ರಿನ ರಿಮ್ಸ್ ಆಸ್ಪತ್ರೆಯಲ್ಲಿ ಮಾನಸಿಕ ತಜ್ಞರಿಂದ ದೊರಕುವ ಚಿಕಿತ್ಸಾ ಸೌಲಭ್ಯವನ್ನು ಪಡೆದುಕೊಳ್ಳಲು ತಿಳಿಸಿದರಲ್ಲದೆ, ಸಮುದಾಯ ಮಟ್ಟದಲ್ಲಿ ಆತ್ಮಹತ್ಯೆ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಮುಕ್ತವಾಗಿ ಮತ್ತು ಮುಗ್ಧವಾಗಿ ಮಾತನಾಡಬೇಕು. ವೈಯಕ್ತಿಕ ಘಟನೆಗಳ, ಕಳಂಕ ಮತ್ತು ಮೌನ, ಭಾವನಾತ್ಮಕ ಯಾತನೆ ಅಥವಾ ಕಷ್ಟದ ಸಮಯಗಳನ್ನು ಎದುರಿಸುತ್ತಿರುವವರನ್ನು ಸಹಾನುಭೂತಿಯಿಂದ ನೋಡಬೇಕು. ಮುಖ್ಯವಾಗಿ ಅಂತಹ ಪ್ರಯತ್ನಕ್ಕೆ ಒಳಗಾದವರನ್ನು ದೂಷಿಸುವ, ಕಳಂಕಿಸುವ ಅಥವಾ ತಾರತಮ್ಯ ಮಾಡದಿರುವಂತೆ ನೋಡಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿ ಡಾ ಶಿವಕುಮಾರ್ ನಾರಾ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ ಯಶೋಧಾ, ಡಿವಿಬಿಡಿಸಿಪಿ ಅಧಿಕಾರಿ ಡಾ ಚಂದ್ರಶೇಖರಯ್ಯ, ಮನೊರೋಗ ತಜ್ಞರಾದ ಡಾ ಮನೋಹರ ಪತ್ತಾರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಜಿಲ್ಲಾ ಹಿರಿಯ ಆರೋಗ್ಯ ಮೇಲ್ವಿಚಾರಕ ಪುಂಡಲೀಕ ಗಂಜಿ, ಡಿಪಿಎಮ್ ನವೀನ್ ಕುಮಾರ್, ಎನ್‌ಸಿಡಿ ಡಿಪಿಸಿ ಡಾ ಮೇಘಾರೆಡ್ಡಿ, ಎಪಡಮಾಲಾಜಿಸ್ಟ್ ಶ್ರೀನಿವಾಸ್, ಆರ್‌ಕೆಎಸ್‌ಕೆ ಕೋಆರ್ಡಿನೆಟರ್ ಜ್ಯೋತಿ ಹಿರಿಯ ಹೆಚ್‌ಐಓ ಸೂಗುರಪ್ಪ, ಮೋಹಿನುದ್ದಿನ್ ಪಾಶಾ, ಹಿರೇಮಠ, ಶರಣಬಸವ, ತಂಗಮ್ಮ, ಮಹಮ್ಮದ್ ಅಲಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101